ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 3 ಸಂಚಿಕೆ 37 ಸೆಪ್ಟೆಂಬರ್ 13, 1981 ಬೆಲೆ : 60 ಪೈಸೆ

ಕಾಂ. ಎ. ಬಿ. ಇನ್ನಿಲ್ಲ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪೊಲಿಟ್‌ಬ್ಯೂರೋ ಸದಸ್ಯ ಹಾಗೂ ಪಕ್ಷದ ತಮಿಳುನಾಡು ರಾಜ್ಯಸಮಿತಿಯ ಕಾರ್ಯದರ್ಶಿಯೂ ಆದ ಕಾಮ್ರೇಡ್ ಎ. ಬಾಲಸುಬ್ರಹ್ಮಣ್ಯಂ ಅವರು ಸೆಪ್ಟೆಂಬರ್ 5ನೇ ತಾರೀಖು ನಂದು ಹೃದಯಾಘಾತದಿಂದ ಮದರಾಸಿನಲ್ಲಿ ನಿಧನರಾದರು.

ಕಾಂ. ಬಾಲಸುಬ್ರಹ್ಮಣ್ಯಂ ಅವರ ಆಕಸ್ಮಿಕ ನಿಧನದಿಂದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೆ ಮಾತ್ರವಲ್ಲ ದೇಶದ ಎಡ ಪ್ರಜಾಪ್ರಭುತ್ವ ಚಳುವಳಿಗೆ, ದುಡಿಯುವ ಜನಕೋಟಿಯ ಹೋರಾಟಕ್ಕೆ, ಕ್ರಾಂತಿಕಾರಿ ಚಳುವಳಿಗೆ ತುಂಬಲಾರದ ನಷ್ಟವಾಗಿದೆ. ವಿದ್ಯಾರ್ಥಿ ಸಂಘಟಕ, ಸ್ವಾತಂತ್ರ್ಯ ಚಳುವಳಿ ಹೋರಾಟಗಾರ, ವಕೀಲಿವೃತ್ತಿ, ಕಾರ್ಮಿಕ ಸಂಘಟನೆಗಳ ಮುಂದಾಳು ಹಾಗೂ ಪಕ್ಷದ ರಾಜ್ಯ ಕಾರ್ಯದರ್ಶಿಯಾಗಿ ಜನಸಾಮಾನ್ಯರ ವಿಶ್ವಾಸ ಮತ್ತು ಮೆಚ್ಚುಗೆ ಪಡೆದು 'ಎಬಿ' ಎಂದು ಕರೆಸಿಕೊಳ್ಳುತ್ತಿದ್ದ ಕಾಮ್ರೇಡ್ ಬಾಲಸುಬ್ರಹ್ಮಣ್ಯಂ ಅವರು 1917ನೇ ಇಸವಿಯಲ್ಲಿ ತಮಿಳುನಾಡಿನ ಮದುರೆ ಜಿಲ್ಲೆಯ ಡಿಂಡಿಗಲ್ ಎಂಬಲ್ಲಿ ಜನಿಸಿದರು.

ಕಾಂ. ಎ. ಬಿ.ಯವರು ಅಣ್ಣಾಮಲೈ ವಿಶ್ವವಿದ್ಯಾಲಯದಲ್ಲಿ ಓದುತ್ತಿರುವಾಗಲೇ ಎಡ ಚಳುವಳಿಯತ್ತ ಆಕರ್ಷಿಸಲ್ಪಟ್ಟರು. ವಿದ್ಯಾರ್ಥಿಗಳ ರಾಷ್ಟ್ರೀಯ ಹೋರಾಟಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದರೊಂದಿಗೆ ರಾಜಕೀಯದಲ್ಲೂ ಭಾಗವಹಿಸಿದರು. ಪದವೀಧರರಾದ ಮೇಲೆ ಮದರಾಸಿನ ಲಾ ಕಾಲೇಜಿನಲ್ಲಿ ವಕೀಲಿ ಶಿಕ್ಷಣವನ್ನು ಪೂರ್ತಿಗೊಳಿಸಿದರು. ಡಿಂಡಿಗಲ್‌ನಲ್ಲಿ ವಕೀಲಿ ವೃತ್ತಿಯನ್ನು ನಡೆಸುವುದರೊಂದಿಗೆ ವಿದ್ಯಾರ್ಥಿರಂಗದಲ್ಲೂ ಕಾರ್ಯನಿರ್ವಹಿಸಿದರು. ವಕೀಲಿ ವೃತ್ತಿಯನ್ನು ಸ್ವಲ್ಪಕಾಲ ನಡೆಸಿದ ಮೇಲೆ ಕಾಂ. ಎ.ಬಿ. ಅವರು ಕಾರ್ಮಿಕರನ್ನು ಸಂಘಟಿಸುವುದನ್ನು ಪ್ರಾರಂಭಿಸಿದರು. ಡಿಂಡಿಗಲ್ಲಿನ ಟೇನ್ನರಿ ಕಾರ್ಮಿಕಸಂಘದ ಸಂಸ್ಥಾಪಕರಲ್ಲಿ ಅವರೂ ಒಬ್ಬರು. 1943ರಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ಸೇರಿದ ಎ.ಬಿ.ಯವರು ಹಲವಾರು ಬಾರಿ ಬಂಧನಕ್ಕೊಳಗಾದರು. ಅನೇಕ ಬಾರಿ ಜೈಲುವಾಸವನ್ನು ಮಾಡಿದರು. 1946ರ ರೈಲ್ವೆಮುಷ್ಕರ ಸಮಯದಲ್ಲಿ ಒಮ್ಮೆ ಬಂಧನಕ್ಕೊಳಗಾದ ಕಾಂ. ಎ. ಬಿ. ಯವರು 1948ರಲ್ಲಿ ಮತ್ತೊಮ್ಮೆ ಬಂಧಿಸಲ್ಪಟ್ಟು ಕೆಲವು ತಿಂಗಳುಗಳ ಕಾಲ ಜೈಲುವಾಸ ಮಾಡಿದರು. 1949ರಲ್ಲಿ ಹೈಕೋರ್ಟ್ ಆಜ್ಞೆಯ ಮೂಲಕ ಬಿಡುಗಡೆಗೊಳಿಸಲ್ಪಟ್ಟ ಕಾಂ. ಎ.ಬಿ. ಅವರು 1951ರ ತನಕ ಭೂಗತರಾಗಿದ್ದರು. 1962ರಲ್ಲಿ ಮತ್ತೆ ಬಂಧಿಸಲ್ಪಟ್ಟು ಒಂಭತ್ತು ತಿಂಗಳು ಜೈಲಿನಲ್ಲಿದ್ದರು. 1964ರಲ್ಲಿ ಪುನಃ ಬಂಧಿಸಲ್ಪಟ್ಟು ಒಂದೂವರೆ ವರ್ಷಕಾಲ ಜೈಲಿನಲ್ಲಿದ್ದರು.

1956ರಲ್ಲಿ ಕಮ್ಯುನಿಸ್ಟ್ ಪಕ್ಷದ ಮದುರೆ ಜಿಲ್ಲಾಸಮಿತಿಯ ಕಾರ್ಯದರ್ಶಿಯಾಗಿ ಆಯ್ಕೆಯಾದರು. ಅದಕ್ಕೆ ಮೊದಲೇ 1953ರಲ್ಲಿ ಪಕ್ಷದ ರಾಜ್ಯಸಮಿತಿಗೆ ಆಯ್ಕೆಯಾಗಿದ್ದು, ಅದರ ಸೆಕ್ರೆಟಾರಿಯೆಟ್ ಸದಸ್ಯರೂ ಆಗಿದ್ದರು. 1964ರಲ್ಲಿ ಪಕ್ಷದ ವಿಭಜನೆಯಾಗುವಾಗ ಅವರು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದೊಂದಿಗೆ ಉಳಿದು ಪರಿಷ್ಕರಣವಾದವನ್ನು ವಿರೋಧಿಸುವುದರಲ್ಲಿ ಪ್ರಮುಖ ಪಾತ್ರವಹಿಸಿದರು. 1964ರಲ್ಲಿ ಕಾಂ. ಎ.ಬಿ.ಯವರು ಸಿ.ಪಿ.ಐ.(ಎಂ)ನ ಕೇಂದ್ರಸಮಿತಿ ಸದಸ್ಯರಾದರು. 1972ರಲ್ಲಿ ಪಕ್ಷದ ತಮಿಳುನಾಡು ರಾಜ್ಯಸಮಿತಿಗೆ ಕಾರ್ಯದರ್ಶಿಯವರಾಗಿಯೂ ಆಯ್ಕೆಯಾದರು. 1978ರಲ್ಲಿ ಕಾಂ. ಎ.ಬಿ.ಯವರು ಪಕ್ಷದ ಪೊಲಿಟ್‌ಬ್ಯೂರೋ ಸದಸ್ಯರಾಗಿ ಆಯ್ಕೆಯಾದರು. 1967 ರಿಂದ 71ರ ತನಕ ತಮಿಳುನಾಡು ಶಾಸನಸಭೆಯಲ್ಲಿ ಸದಸ್ಯರಾಗಿದ್ದರು. ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಅವರು ಭೂಗತರಾಗಿ ಕೆಲಸ ನಿರ್ವಹಿಸಿದರು. ಪತ್ನಿ, ಎರಡು ಜನ ಪುತ್ರರು ಮತ್ತು ಒಬ್ಬ ಪುತ್ರಿಯನ್ನು ಅಗಲಿ ಹೋಗಿರುವರು ಕಾಂ. ಬಾಲಸುಬ್ರಹ್ಮಣ್ಯಂ.

ಜೀವಿತದ ಕಾಲದುದ್ದಕ್ಕೂ ಸಂಪೂರ್ಣ ತ್ಯಾಗಮಾಡಿ ಕಾರ್ಮಿಕವರ್ಗದ ಹಿತಾಸಕ್ತಿಗಾಗಿಯೂ, ಕ್ರಾಂತಿಕಾರಿ ಹೋರಾಟಗಳನ್ನು ಮುನ್ನಡೆಸುವುದರಲ್ಲೂ ಶ್ರಮಿಸಿರುವ ಕಾಂ. ಬಾಲಸುಬ್ರಹ್ಮಣ್ಯಂ ಅವರು ತೀವ್ರವಾದ ರಕ್ತದ ಒತ್ತಡದ ಖಾಯಿಲೆಗೆ ತುತ್ತಾಗಿದ್ದರು. ಆದರೆ ಕ್ರಾಂತಿಕಾರಿಗಳ ಸಂಪ್ರದಾಯದಂತೆ ತನ್ನ ಕ್ಷೀಣಿಸಿರುವ ಆರೋಗ್ಯವನ್ನು ಗಮನಕ್ಕೆ ತೆಗೆದುಕೊಳ್ಳದೆ ಸದಾ ಶ್ರಮಿಸಿದ ಕಾಂ. ಎ.ಬಿ. ಯವರ ನಿಧನದ ಬಗ್ಗೆ ಸಿ. ಪಿ. ಐ. (ಎಂ) ಪೊಲಿಟ್‌ಬ್ಯೂರೋವು ತನ್ನ ತೀವ್ರವಾದ ದುಃಖವನ್ನು ವ್ಯಕ್ತಪಡಿಸಿ, ಸಂತಾಪವನ್ನು ಸೂಚಿಸಿದೆ. ಪಕ್ಷದ ಪ್ರಧಾನಕಾರ್ಯದರ್ಶಿಯವರೂ ಸೇರಿದಂತೆ ಬೇರೆಬೇರೆ ರಾಜ್ಯಗಳ ಮುಖಂಡರುಗಳು ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡು, ಅಗಲಿಹೋದ ಕ್ರಾಂತಿಕಾರಿಗೆ ತಮ್ಮ ಕೊನೆಯ ಗೌರವವನ್ನು ಸಲ್ಲಿಸಿದ್ದಾರೆ. ಪಕ್ಷದ ಕರ್ನಾಟಕ ರಾಜ್ಯಸಮಿತಿಯೂ ಕಾಂ. ಎ. ಬಿ. ಯವರ ನಿಧನಕ್ಕೆ ತನ್ನ ತೀವ್ರ ಸಂತಾಪವನ್ನು ಸೂಚಿಸಿದೆ. ಜೀವಿತದುದ್ದಕ್ಕೂ ತ್ಯಾಗ ಬಲಿದಾನಗಳ ಮೂಲಕ ಹೋರಾಟಮಾಡಿ ನಮ್ಮನ್ನಗಲಿಹೋದ ಕ್ರಾಂತಿಕಾರಿ ಕಾಮ್ರೇಡ್ ಎ. ಬಿ. ಅವರು ಯಾವ ಉದ್ದೇಶಗಳಿಗಾಗಿ ಹೋರಾಡಿರುವರೋ, ಅವುಗಳನ್ನು ಸಾಧಿಸುವುದಕ್ಕಾಗಿ ಪಣತೊಡೋಣ.

●

ಕಾಂ. ಎ. ಬಿ. ಯವರಿಗೆ ಕೆಂಪು ವಂದನೆಗಳು



ಕಾಂ. ಎ.ಬಿ.,

ನಿಮ್ಮ ಪಕ್ಕೆಲುಬು ಮುರಿದಿದ್ದ ಸಂಗತಿ ಗೊತ್ತಾದ ನಂತರವೂ ತೀಕದೀರ್ (ಪಕ್ಷದ ತಮಿಳುನಾಡು ಘಟಕದ ಮುಖಪತ್ರ)ನ ಕಛೇರಿಯಲ್ಲಿ ಕೆಲಸ ಮುಂದುವರೆಸಲು ನಿರ್ಧರಿಸಿದ್ದಿರಿ. ನಿಗದಿಪಡಿಸಿದ ಕಾರ್ಯಕ್ರಮಗಳಿಗೆಲ್ಲ ಹಾಜರಾಗಿದ್ದಿರಿ. ಅವಿಶ್ರಾಂತ ದುಡಿಮೆಯಿಂದಾಗಿ ನಮ್ಮನ್ನಗಲಿದಿರಿ.

ಕಾಂ. ಎ.ಬಿ.!

ನಿಮ್ಮ ಧೈರ್ಯ, ಮಾರ್ಕ್ಸ್‌ವಾದ-ಲೆನಿನ್‌ವಾದದಲ್ಲಿ ನಿಮಗಿದ್ದ ಅಚಲನಿಷ್ಠೆ, ಪಾರ್ಟಿಯನ್ನು ಬಲಪಡಿಸಲು ನೀವು ಮಾಡಿದ ಅವಿರತ ಪ್ರಯತ್ನ ನಮಗೆಲ್ಲ ದಾರಿದೀಪ.

ಕಾರ್ಮಿಕಸಂಘಟನೆಗಳು ಬಾಲ್ಯಾವಸ್ಥೆಯಲ್ಲಿದ್ದಾಗ ನೀವು ಸಲ್ಲಿಸಿದ ಅಮೋಘ ಸೇವೆಯನ್ನು ಜ್ಞಾಪಿಸಿಕೊಳ್ಳುತ್ತಾ, ನಾವು ದುಡಿಯುವವರ್ಗದ ಒಗ್ಗಟ್ಟನ್ನು ಕಾಯಲು ಯತ್ನಿಸುತ್ತೇವೆ.

ನಾವು, ಕಾರ್ಮಿಕರು, ರೈತರು, ಮಧ್ಯಮವರ್ಗದವರು, ವಿದ್ಯಾರ್ಥಿ-ಯುವಜನರು ಮೊದಲಾದವರೆಲ್ಲ ನೀವು ನಮಗೆ ತೋರಿಸಿದ ಗುರಿಯನ್ನು ತಲುಪಲು ಹೆಣಗುತ್ತೇವೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ತಮಿಳುನಾಡು ಘಟಕದ ಕಾರ್ಯದರ್ಶಿಯಾಗಿ, ಪೊಲಿಟ್‌ಬ್ಯೂರೋ ಸದಸ್ಯರಾಗಿ ಪ್ರಜಾಪ್ರಭುತ್ವ ಶಕ್ತಿಗಳನ್ನು ಬಲಪಡಿಸಲು, ಸರ್ವಾಧಿಕಾರಿ ಶಕ್ತಿಗಳ ವಿರುದ್ಧ ಹೋರಾಡಲು ನೀವು ಸಲ್ಲಿಸಿದ ಅಮೋಘ ಸೇವೆ ಚಿರಸ್ಮರಣೀಯ.

ನಾವು ನಿಮ್ಮ ಕಾರ್ಯವನ್ನು ಮುಂದುವರೆಸುವ ಪಣತೊಡುತ್ತೇವೆ.

ವಿವಿದೆಡೆ ಕಪ್ಪು ದಿನಾಚರಣೆ

ರಾಷ್ಟ್ರೀಯ ಚಳುವಳಿ ಸಮಿತಿ (ಎನ್.ಸಿ.ಸಿ.)ಯ ರಾಜ್ಯ ಘಟಕದ ಕರೆಯ ಮೇರೆಗೆ ಮುಷ್ಕರ ನಿಷೇಧ ಸುಗ್ರೀವಾಜ್ಞೆಯನ್ನು ವಿರೋಧಿಸಿ 17-8-81ರಂದು ರಾಜ್ಯದ ವಿವಿದೆಡೆ ಕಪ್ಪು ದಿನಾಚರಣೆ ನಡೆದ ವರದಿಗಳು ಬಂದಿವೆ.

ಧಾರವಾಡ

ಆಗಸ್ಟ್ 17ರಂದು, ಧಾರವಾಡದ ಕೃಷಿ ಕಾಲೇಜಿನ ಕಾರ್ಮಿಕರು, ಪ್ಲೈವುಡ್ ಕಾರ್ಮಿಕರು, ಎಲ್ಲೈಸಿ, ಬ್ಯಾಂಕ್, ಸತ್ತೂರ ಕಿರ್ಲೋಸ್ಕರ್, ಮೀನಾಕ್ಷಿ ಆಯಿಲ್‌ಮಿಲ್ ಕಾರ್ಮಿಕರು, ಕರ್ನಾಟಕ ವಿಶ್ವವಿದ್ಯಾಲಯದ ನೌಕರರು ಮತ್ತು ವ್ಯಾಪ್ಯುಂಜಯ ಮಾರು ಕಟ್ಟೆಯ ಕೂಲಿಗಳು ಜೊತೆಗೂಡಿ ಭಾರೀ ಮೆರವಣಿಗೆ ಹೊರಡಿಸಿದ್ದರು.

ಸಭೆಯನ್ನುದ್ದೇಶಿಸಿ ಕಾಂ. ವಿ.ಎಸ್. ಹಳಕಟ್ಟಿ, ದೇಶಪಾಂಡೆ, ಜಿ. ವಿ. ಹಿರೇಮಠ ಮತ್ತು ಕಾಂ. ರಾವ್ ಮಾತನಾಡಿ ಸುಗ್ರೀವಾಜ್ಞೆಯನ್ನು ಹಿಂತೆಗೆದುಕೊಳ್ಳಲು ಒತ್ತಾಯಿಸಿದರು.

ಪುತ್ತೂರು

ದ. ಕ. ಜಿಲ್ಲೆಯ ಪುತ್ತೂರಿನ ಕಾರ್ಮಿಕರ ಕ್ರಿಯಾವೇದಿಕೆ ಆಶ್ರಯದಲ್ಲಿ 17-8-81ರಂದು ಕಾರ್ಮಿಕರು ಕಪ್ಪು ಬ್ಯಾಡ್ಜ್ ಧರಿಸಿ ಬೃಹತ್ ಮೆರವಣಿಗೆಯನ್ನು ಹೊರಡಿಸಿದ್ದರು. ಬ್ಯಾಂಕ್, ಎಲ್ಲೈಸಿ, ಬೀಡಿ ಮತ್ತು ಸಾರಿಗೆ ಕಾರ್ಮಿಕರು ಈ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಕಾರ್ಮಿಕರನ್ನುದ್ದೇಶಿಸಿ ಕ್ರಿಯಾವೇದಿಕೆಯ ಸಂಚಾಲಕ ಕಾಂ. ವಿಲಿಯಂ ರೋಡ್ರಿಗಸ್, ಗೋಪಾಲಶೆಟ್ಟಿ, ಬಿ. ರಾಮಕೃಷ್ಣ ಮುಂತಾದವರು ಮಾತನಾಡಿ ಸುಗ್ರೀವಾಜ್ಞೆಗೆ ತಮ್ಮ ಪ್ರತಿಭಟನೆ ವ್ಯಕ್ತಪಡಿಸಿದರು.

ಕುಂದಾಪುರ

ದ. ಕ. ಜಿಲ್ಲೆಯ ಕುಂದಾಪುರದಲ್ಲಿ ಆಗಸ್ಟ್ 17ರಂದು ಸುಗ್ರೀವಾಜ್ಞೆಯನ್ನು ಪ್ರತಿಭಟಿಸಿ ಕಾರ್ಮಿಕರ ಬೃಹತ್ ಮೆರವಣಿಗೆ ಮತ್ತು ಸಾರ್ವಜನಿಕ ಸಭೆ ನಡೆಯಿತು.

ಮೆರವಣಿಗೆಯ ನಂತರ ನಡೆದ ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಕಾಂ. ಸಿ. ನಾರಾಯಣರು ವಹಿಸಿದ್ದರು. ಕಾರ್ಮಿಕರನ್ನುದ್ದೇಶಿಸಿ ಕಾಂ. ಅಬ್ರಹಾಂ ಕರ್ಕಡರು ಮಾತನಾಡುತ್ತಾ ಮುಷ್ಕರ ನಿಷೇಧ ಸುಗ್ರೀವಾಜ್ಞೆಯನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಒತ್ತಾಯಿಸಿದರು.

ಕೊನೆಯಲ್ಲಿ ಕಾಂ. ವಿ. ಮಹಾಬಲ ಅವರು ಧನ್ಯವಾದಗಳನ್ನರ್ಪಿಸಿದರು.

ಬಿಣಗಾ

17-8-81ರಂದು ಬಿಣಗಾದ ಕಾಸ್ಟಿಕ್ ಸೋಡಾ ಫ್ಯಾಕ್ಟರಿಯ ಕಾರ್ಮಿಕರು ಸುಗ್ರೀವಾಜ್ಞೆ ಪ್ರತಿಭಟಿಸಿ ಕಪ್ಪುದಿನ ಆಚರಿಸಿದರು. ಅಂದು ಸಾಯಂಕಾಲ ಸುಮಾರು 1000 ಕಾರ್ಮಿಕರು 'ಅ ಸಂಸು' ವಿರುದ್ಧ ಘೋಷಣೆ ಕೂಗುತ್ತಾ ಮೆರವಣಿಗೆ ಹೊರಡಿಸಿದ್ದರು.

ನಂತರ ಯೂನಿಯನ್ ಆಫೀಸೆದುರು ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಕಾಂ. ಎಂ. ಎಸ್. ಧಾರೇಶ್ವರ, ಡಿ. ಪಿ. ಗಾಂವಕರ್, ಕೆ.ಎಸ್. ಕೃಷ್ಣಪ್ಪ, ಎನ್. ಜಿ. ನಾಯ್ಕ ಮತ್ತು ಎಸ್. ಎನ್. ನಾಯ್ಕ ಮೊದಲಾದವರು ಮಾತನಾಡಿ ಕಾರ್ಮಿಕ ಹಕ್ಕುಗಳನ್ನು ಮೊಟಕುಗೊಳಿಸುವ ಸುಗ್ರೀವಾಜ್ಞೆಯನ್ನು ವಾಪಸ್ ತೆಗೆದುಕೊಳ್ಳುವಂತೆ ಒತ್ತಾಯಿಸಿದರು.

ರಾಯಚೂರು

ಅಗತ್ಯ ಸೇವಾ ಸುಗ್ರೀವಾಜ್ಞೆಯನ್ನು ವಿರೋಧಿಸಿ ಎನ್.ಸಿ.ಸಿ.ಯ ಕರೆಯ ಮೇರೆಗೆ ರಾಯಚೂರಿನ ಕಾರ್ಮಿಕಸಂಘಗಳ ಸಮನ್ವಯ ಸಮಿತಿಯ ಪರವಾಗಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಜಿಲ್ಲಾಧಿಕಾರಿಗಳನ್ನು ಭೇಟಿಮಾಡಿದ ನಿಯೋಗದಲ್ಲಿ ಕಾಂ. ಪುರುಷೋತ್ತಮ, ಮಧುಸೂದನ್, ಖಮರುದ್ದೀನ್, ರಾಧಾಕೃಷ್ಣ, ಎಂ. ನಾಗಪ್ಪ ಮತ್ತು ಕಾಂ. ಎನ್.ಕೃಷ್ಣನ್ ನಾಯರ್ ಈ ಮೊದಲಾದವರಿದ್ದರು.

ಭದ್ರಾವತಿ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ಭಾರತ ಕಮ್ಯುನಿಸ್ಟ್ ಪಕ್ಷಗಳ ಜಂಟಿ ಆಶ್ರಯದಲ್ಲಿ ದಿನಾಂಕ 17-8-81ರಂದು ಸುಗ್ರೀವಾಜ್ಞೆಯ ವಿರುದ್ಧ ಬಹಿರಂಗ ಸಭೆ ನಡೆಯಿತು.

ಸಭೆಯ ಅಧ್ಯಕ್ಷತೆಯನ್ನು ಎ.ಐ.ಟಿ.ಯು.ಸಿ.ಯ ಮುನಿಸ್ವಾಮಿಯವರು ವಹಿಸಿದ್ದರು. ಸಭೆಯನ್ನುದ್ದೇಶಿಸಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾಂ. ಕೆ. ನಾಗರಾಜ್ ಮತ್ತು ಸಿ.ಪಿ.ಐ.ನ ಡಿ. ಸಿ. ಮಾಯಣ್ಣ ಮಾತನಾಡಿ ಸುಗ್ರೀವಾಜ್ಞೆಯನ್ನು ಖಂಡಿಸಿದರು. ●

ಕನಿಷ್ಠ ಕೂಲಿಗೆ ಒತ್ತಾಯಿಸಿ ಕೃಷಿಕಾರ್ಮಿಕರ ಜಾಥಾ

ದಕ್ಷಿಣ ಭಾರತ ಸಮಾವೇಶವು ಕೊಟ್ಟ ಕರೆಯ ಅನುಗುಣವಾಗಿ ದಿನಾಂಕ 31-8-81ರಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ಸಹಸ್ರಾರು ಕೃಷಿಕಾರ್ಮಿಕರು 500ರೂ. ಕನಿಷ್ಟ ಕೂಲಿಗೆ ಒತ್ತಾಯಿಸಿ ಸುಮಾರು 25 ಕಿ.ಮಿ. ದೂರದಿಂದ ಜಾಥಾದಲ್ಲಿ ಬಂದು ಧಾರವಾಡದಲ್ಲಿ ಜಿಲ್ಲಾಧಿಕಾರಿಯವರ ಕಚೇರಿ ಎದುರು ಮತಪ್ರದರ್ಶನ, ಧರಣಿ ಸತ್ಯಾಗ್ರಹ ನಡೆಸಿದರು. ಈ ಜಾಥಾದಲ್ಲಿ ಸುಮಾರು 200ಜನ ಮಹಿಳೆಯರೂ ಪಾಲ್ಗೊಂಡಿದ್ದರು.

ಅಳ್ನಾವರಣದ ಹತ್ತಿರದ ಪ್ರಭುನಗರ, ಅರವಟಗಿ, ಮುಂಗದ, ನರೇಂದ್ರ, ಧಾರವಾಡ ಕೃಷಿಕಾಲೇಜಿನ ಕೃಷಿಕಾರ್ಮಿಕರು ಜಾಥಾದಲ್ಲಿ ಪಾಲ್ಗೊಂಡಿದ್ದರು.

ಸರ್ಕಾರ ಆಗಸ್ಟ್ 13ರಂದು ದಿನಗೂಲಿ ದರ (5·75ರೂ.ಗಳಿಂದ 7·50ರೂ.)ಗಳನ್ನು ನಿಗದಿಪಡಿಸಿ ಹೊರಡಿಸಿರುವ ಪ್ರಕಟನೆಯ ಬಗ್ಗೆ ಆಕ್ಷೇಪಣೆಗಳನ್ನು ಕೇಳಿಕೊಂಡಿತ್ತು. ಈ ದರಗಳು ಇಂದಿನ ಬೆಲೆ ಏರಿಕೆಗೆ ಅನುಗುಣವಾಗಿಲ್ಲ ಎಂದು ಪ್ರತಿಭಟಿಸಿ 500ರೂ. ಕನಿಷ್ಟ ಕೂಲಿ ಇರಬೇಕೆಂದು ಒತ್ತಾಯಿಸಿ ಈ ಜಾಥಾವನ್ನು ವ್ಯವಸ್ಥೆಗೊಳಿಸಲಾಗಿತ್ತು.

ಸಚಿವರ ಉದ್ಧಟತನ

ಈ ಸಂದರ್ಭದಲ್ಲಿ ಧಾರವಾಡ ಸರ್ಕೀಟ್ ಹೌಸ್‌ನಲ್ಲಿ ಜಿಲ್ಲೆಯ ಸಚಿವ ಶಂಕರರಾವ್ ತಂಗಿದ್ದರು. ಕೃಷಿಕಾರ್ಮಿಕರು ಕಾಂ. ವಿ. ಎಸ್. ಹಳಕಟ್ಟಿಯವರ ನೇತೃತ್ವದಲ್ಲಿ ಜಿಲ್ಲಾಧಿಕಾರಿಯವರ ಮುಖಾಂತರ ಶಂಕರರಾವ್‌ರಿಗೆ ಮನವಿ ಸಲ್ಲಿಸಿದರು. ಶ್ರೀ ಶಂಕರರಾವ್ ಈ ಕುರಿತು ಮಾತನಾಡಲೂ ನಿರಾಕರಿಸುವ ಉದ್ಧಟತನ ತೋರಿಸಿದರು. ಕಾಂ. ಹಳಕಟ್ಟಿಯವರು ಅಂಕಿಅಂಶ ಸಮೇತ ಸರಕಾರದ ದರಗಳನ್ನು ವಿಮರ್ಶಿಸಿದಾಗ "ನಾನು ಏನನ್ನೂ ಕೇಳಲೂ ಸಿದ್ಧನಿಲ್ಲ" ಎಂದು ಶಂಕರರಾವ್ ನುಡಿದರು. ಸಚಿವರ ಉದ್ಧಟತನದಿಂದ ರೊಚ್ಚಿಗೆದ್ದ ಕೃಷಿಕಾರ್ಮಿಕರು ಧಿಕ್ಕಾರದ ಘೋಷಣೆಗಳನ್ನು ಕೂಗಿದರು. ಧರಣಿ ಸತ್ಯಾಗ್ರಹ ಪ್ರಾರಂಭಿಸಿದರು.

ನಂತರ ಸರ್ಕೀಟ್ ಹೌಸ್ ಎದುರು ಸೇರಿದ್ದ ಸಭೆಯನ್ನುದ್ದೇಶಿಸಿ ಕಾಂ. ಹಳಕಟ್ಟಿಯವರು ಮಾತನಾಡುತ್ತಾ ಸಚಿವರ ನಡವಳಿಕೆಗೆ ತೀವ್ರ ಆಕ್ಷೇಪಣೆ ವ್ಯಕ್ತಪಡಿಸಿದರು. ಕಾರ್ಮಿಕರ ಬೇಡಿಕೆ ಪ್ರಶ್ನೆ ಬಂದಾಗ ರೈತರ ಕಡೆ ಕೈತೋರಿಸುವ, ರೈತರ ಪ್ರಶ್ನೆ ಬಂದಾಗ ಕೃಷಿಕಾರ್ಮಿಕರ ಕಡೆ ಕೈತೋರಿಸುವ ಸರಕಾರದ ಧೋರಣೆಯನ್ನು ಕಟುವಾಗಿ ಟೀಕಿಸಿದ ಕಾಂ. ಹಳಕಟ್ಟಿಯವರು, ಇಂದು ಕೃಷಿಕಾರ್ಮಿಕರೇ ತಮ್ಮ ಬೇಡಿಕೆಗಳ ಬಗ್ಗೆ ಒತ್ತಾಯಿಸುತ್ತಿರುವಾಗ ಸರಕಾರ ಗಮನಿಸದಿರುವುದನ್ನು ಎತ್ತಿತೋರಿಸಿದರು. ಬೇಡಿಕೆಗಳನ್ನು ಕುರಿತು ಚರ್ಚಿಸುವ ಸೌಜನ್ಯವನ್ನೂ ತೋರಿಸದೇ ಮೊಸಳೆ ಕಣ್ಣೀರನ್ನು ಸುರಿಸುತ್ತಿರುವುದನ್ನು ಖಂಡಿಸಿದ ಕಾಂ. ಹಳಕಟ್ಟಿಯವರು ಪ. ಬಂಗಾಲ ಮತ್ತು ಕೇರಳಗಳಲ್ಲಿ ಕೃಷಿಕಾರ್ಮಿಕರ ಬಗ್ಗೆ ಅಲ್ಲಿನ ಸರಕಾರಗಳ ಪ್ರೋತ್ಸಾಹ ಬೆಂಬಲವನ್ನು ಕುರಿತು ತಿಳಿಯಪಡಿಸಿದರು.

ನಂತರ ಶ್ರೀಮತಿ ಲಕ್ಷ್ಮವ್ವ ಮುಂತಾದವರು ಮಾತನಾಡುತ್ತ ಸರಕಾರದ ಧೋರಣೆಯ ಬಗ್ಗೆ ಆಕ್ರೋಷ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಹಾಜರಿದ್ದ ಪತ್ರಕರ್ತರನ್ನುದ್ದೇಶಿಸಿ ಕಂಕಳದಲ್ಲಿ ಹಸುಗೂಸುಗಳನ್ನು ಹಿಡಿದಿದ್ದ ಮಹಿಳೆಯರು "3 ರೂ.ಗೆ ಲೀಟರ್ ಚಿಮಣಿ ಎಣ್ಣೆ (ಸೀಮೆ ಎಣ್ಣೆ), 3-50 ರೂ.ಗೆ ಕೆ. ಜಿ. ಅಕ್ಕಿ, 5 ರೂ. ಕೆ. ಜಿ. ಬೆಲ್ಲ, ಏನು ಮಣ್ಣು ತಿನ್ನೋಣ ಹೇಳಿರಿ ನೀವರ" ಎಂದು ಪ್ರಶ್ನಿಸಿದರು.

ಮನವಿ ಸಲ್ಲಿಸಲು ತೆರಳಿದ್ದ ನಿಯೋಗದಲ್ಲಿ ಕಾಂ. ಹಳಕಟ್ಟಿ, ಎಸ್. ಬಿ. ಕೆಲಗೇರಿ, ಆರ್.ಬಿ. ಬಿದರಗಡ್ಡಿ, ಬಿ. ಕೆ. ಸವದತ್ತಿ, ಶ್ರೀಮತಿ ಲಕ್ಷ್ಮವ್ವ ಮೊದಲಾದವರಿದ್ದರು.

○

ಬೇಡಿಕೆ ದಿನಾಚರಣೆ

ಹಾಸನ

ಕನಿಷ್ಠ ವೇತನ ವ್ಯಾಪ್ತಿಗೆ ಒಳಪಡುವ ದಕ್ಷಿಣ ಭಾರತ ಸಮಾವೇಶವು ಕೊಟ್ಟ ಕರೆಗನುಗುಣವಾಗಿ ದಿನಾಂಕ 31-8-81ರಂದು ಹಾಸನದಲ್ಲಿ ಸಿ. ಐ. ಟಿ. ಯು. ಮತ್ತು ಎ. ಐ. ಟಿ. ಯು. ಸಿ.ಗಳಿಗೆ ಸೇರಿದ ಕಾರ್ಮಿಕರು ಜಂಟಿಯಾಗಿ ಬೇಡಿಕೆ ದಿನಾಚರಣೆ ಆಚರಿಸಿದರು.

ಜಿಲ್ಲೆಯ ನಾನಾ ಭಾಗಗಳಿಂದ ಬಂದ ಕಾರ್ಮಿಕರು ಹಾಸನ ನಗರದ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ಹಾಸನ ಜಿಲ್ಲಾಧಿಕಾರಿಯವರ ಮೂಲಕ ಮುಖ್ಯಮಂತ್ರಿಗೆ ಬೇಡಿಕೆಗಳನ್ನು ಕುರಿತು ಒತ್ತಾಯಿಸುವ ಮನವಿ ಅರ್ಪಿಸಲಾಯಿತು. ನಂತರ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಧರಣಿ ಸತ್ಯಾಗ್ರಹ ನಡೆಯಿತು. ಸತ್ಯಾಗ್ರಹಿಗಳನ್ನುದ್ದೇಶಿಸಿ ಎ. ಐ. ಟಿ. ಯು. ಸಿ.ಯ ಕಾಂ. ಸುಜಾತಾ ರಾಧಾಕೃಷ್ಣ ಮತ್ತು ಸಿ. ಐ. ಟಿ. ಯು. ವಿನ ಕಾಂ. ವಿ. ಸುಕುಮಾರ್ ಮಾತನಾಡಿದರು.

ಚಿಕ್ಕಮಗಳೂರು

31-8-81 ರಂದು ಚಿಕ್ಕಮಗಳೂರು ಜಿಲ್ಲಾಧಿಕಾರಿಯವರ ಕಚೇರಿಯ ಎದುರು ಕನಿಷ್ಠ ವೇತನದ ಕಾಯ್ದೆಯ ವ್ಯಾಪ್ತಿಗೆ ಒಳಪಡುವ ಕಾಫಿ ತೋಟ ಮತ್ತು ಕಾಫೀ ಕ್ಯೂರಿಂಗ್‌ನ ಕಾರ್ಮಿಕರು ಸಿ. ಐ. ಟಿ. ಯು. ಮತ್ತು ಎ.ಐ.ಟಿ.ಯು.ಸಿ.ಗಳ ನೇತೃತ್ವದಲ್ಲಿ ಧರಣಿ ಸತ್ಯಾಗ್ರಹ ನಡೆಸಿದರು.

ಪ್ರಸ್ತುತ ಬೆಲೆಏರಿಕೆಯ ಅನುಗುಣವಾಗಿ ತಿಂಗಳಿಗೆ 1-4-81ರ ಬಳಕೆದಾರರ ಬೆಲೆಸೂಚ್ಯಂಕವನ್ನು ಆಧಾರವಾಗಿಟ್ಟು 500 ರೂ.ಕ್ಕಿಂತ ಕಡಿಮೆ ಕನಿಷ್ಠ ವೇತನವಿರಕೂಡದು ಮತ್ತು ಇನ್ನಿತರ ಬೇಡಿಕೆಗಳನ್ನೊಳಗೊಂಡ ಮನವಿಪತ್ರವನ್ನು ಜಿಲ್ಲಾಧಿಕಾರಿಗಳಿಗೆ ಅರ್ಪಿಸಲಾಯಿತು. ಜಿಲ್ಲಾಧಿಕಾರಿಗಳನ್ನು ಭೇಟಿಮಾಡಿದ ನಿಯೋಗದಲ್ಲಿ ಸಿ. ಐ. ಟಿ. ಯು.ವಿನ ಕಾಂ. ಎ. ಕೆ. ವಿಶ್ವನಾಥ, ಎ. ಸಿ. ಕೇಶವ ಮತ್ತು ಎ.ಐ.ಟಿ.ಯು.ಸಿ.ಯ ಕಾಂ. ಎಚ್. ಎಂ. ರೇಣುಕಾರಾಧ್ಯ ಮತ್ತು ಕಾಂ. ಲೋಕೇಶ್ ಇದ್ದರು. ●

ಕಾರ್ಯಕರ್ತರ ಸಭೆ

6-9-81ರಂದು ಸುಳ್ಯ ತಾಲ್ಲೂಕಿನ ಸಂಪಾಜೆವಲಯದ ಡಿ.ವೈ.ಎಫ್.ಐ.ಯ ಕಾರ್ಯಕರ್ತರ ಸಭೆಯು ಕಾಂ. ಮುಹಮ್ಮದ್‌ರವರ ಅಧ್ಯಕ್ಷತೆಯಲ್ಲಿ ಜರುಗಿತು. ಈ ಸಭೆಯನ್ನು ಡಾಕ್ಟರ್ ಗೋಪಾಲರವರು ಸ್ವಾಗತಿಸಿದರು. ಮುಖ್ಯ ಅತಿಥಿಗಳಾಗಿ ಸುಳ್ಯ ತಾಲ್ಲೂಕಿನ ಡಿ. ವೈ. ಎಫ್. ಐ.ಯ ಅಧ್ಯಕ್ಷರಾದ ಪಿ. ಮೂಸ ಮತ್ತು ಚಿನ್ನಪ್ಪರು ಆಗಮಿಸಿದ್ದರು. ಮುಂದಿನ ಸಾಲಿನ ಸಂಪಾಜೆ ವಲಯದ ಡಿ. ವೈ. ಎಫ್. ಐ. ಅಧ್ಯಕ್ಷರಾಗಿ ಮುಹಮ್ಮದ್, ಕಾರ್ಯದರ್ಶಿಯಾಗಿ ಕುಂಞಕಣ್ಣನ್‌ರವರನ್ನು ಒಳಗೊಂಡ 9 ಮಂದಿಯ ಕಾರ್ಯಕಾರೀ ಸಮಿತಿಯನ್ನು ರಚಿಸಲಾಯಿತು. ○

ಚಂದಾ ವಿವರ

ಬಿಡಿ ಪ್ರತಿ	: 60ಪೈಸೆ
6 ತಿಂಗಳಿಗೆ	: 15ರೂ.
ವಾರ್ಷಿಕ ಚಂದಾ	: 30ರೂ.

ಭಾರತ ದೇಶದಲ್ಲಿ

ಅಂತುಳೆಯವರಿಂದ ಇಂದಿರಾ ಹೆಸರು ಮಾರಾಟ

ಗುಂಡೂರಾವ್ ಸರಕಾರದ ಇಬ್ರಾಹಿಂ ಪ್ರಕರಣದ ಬಿರುಗಾಳಿ ಇಬ್ರಾಹಿಂ ರಾಜೀನಾಮೆಯೊಂದಿಗೆ ಮುಂಬಯಿ ತಲುಪಿ ಮಹಾರಾಷ್ಟ್ರದ ಮುಖ್ಯಮಂತ್ರಿ ಅಂತುಳೆಯವರನ್ನಾವರಿಸಿದೆ. ಕರ್ನಾಟಕದಲ್ಲಿ ವಿರೋಧಿ ಪಕ್ಷಗಳ ಹಾಗೂ ಜನತೆಯ ಐಕ್ಯ ಚಳುವಳಿ ಇಬ್ರಾಹಿಂರವರ ಬಲಿ ತೆಗೆದುಕೊಂಡಿತು. ಆದರೆ ಮಹಾರಾಷ್ಟ್ರದಲ್ಲಿ ಅಂತುಳೆಯವರ ಹಣ ಕೂಡಿಸುವ ಕ್ರಮವನ್ನು ಟೀಕಿಸಿದ ಶಾಲಿನೀಬಾಯಿ ಪಾಟೀಲರು ಮಂತ್ರಿ ಸ್ಥಾನದಿಂದ ಕಿತ್ತೊಗೆಯಲ್ಪಟ್ಟಿದ್ದಾರೆ. ಇಂದಿರಾಗಾಂಧಿ ಪ್ರತಿಭಾ ಪ್ರತಿಷ್ಠಾನ ಮತ್ತಿನ್ನಿತರ 11ಟ್ರಸ್ಟ್‌ಗಳಿಗೆ ಕೋಟ್ಯಾವಧಿ ರೂಪಾಯಿ ಕೂಡಿಸಿದ ಘಟನೆ ಮಹಾರಾಷ್ಟ್ರ ವಿಧಾನಸಭೆ ಹಾಗೂ ಲೋಕಸಭೆಯಲ್ಲಿ ಕೋಲಾಹಲ ಎಬ್ಬಿಸಿದ್ದು ಅಂತುಳೆಯವರ ಕುರ್ಚಿ ಅಲುಗಾಡುತ್ತಿದೆ. ಜನತೆಯ ಚಳುವಳಿ ಬಲವಾದರೆ ದಿಲ್ಲಿ ರಾಣಿಯ ಕಟಾಕ್ಷ ಅಂತುಳೆ ಮೇಲೆ ಬಿದ್ದು ಭಸ್ಮವಾಡಬಹುದು. ಆದರೆ ಅಂತುಳೆ ಕೂಡಿಹಾಕಿದ 12 ಟ್ರಸ್ಟ್‌ಗಳ 125 ಕೋಟಿ ರೂಪಾಯಿ ಮಾತ್ರ ಅಂತುಳೆ ಟ್ರಸ್ಟಾಗಿ ಜೀವಂತ ಉಳಿಯುತ್ತದೆ.

ಇಂದಿರಾ ಕೃಪಾಶೀರ್ವಾದದಿಂದ ಕಾಂಗ್ರೆಸ್ ಆಳ್ವಿಕೆಯಲ್ಲಿರುವ ರಾಜ್ಯಗಳಲ್ಲಿ ಎಂಥ ವಿಚಿತ್ರಕಾರಿ ಘಟನೆಗಳು ನಡೆಯುತ್ತಿವೆ; ಅವುಗಳನ್ನು ಕೇಂದ್ರಮಂತ್ರಿಗಳು ಯಾವ ರೀತಿ ರಕ್ಷಿಸುತ್ತಿದ್ದಾರೆ ಎಂಬುದಕ್ಕೆ ಅಂತುಳೆ ಪ್ರಕರಣವೇ ಸಾಕ್ಷಿ.

ಬಡವರ ಉದ್ಧಾರಕ್ಕಾಗಿ ಇಂದಿರಾ ಗಾಂಧಿ ಪ್ರತಿಭಾ ಪ್ರತಿಷ್ಠಾನ ಸ್ಥಾಪನೆ. ಅಂತುಳೆಯವರ ಮತಕ್ಷೇತ್ರ ರತ್ನಗಿರಿ, ಕೊಂಕಣ ಪ್ರದೇಶದಲ್ಲಿ, ಅಭಿವೃದ್ಧಿ ಕೆಲಸಗಳಿಗಾಗಿ, ಆ ಪ್ರದೇಶದ ಜನ ಮುಂಬಯಿಗೆ ಬಂದಾಗ ಅವರಿಗೆ ಎಲ್ಲ ಸೌಲಭ್ಯ ಒದಗಿಸಿಕೊಡುವ ಸಲುವಾಗಿ ಕೊಂಕಣ ಉನ್ನತಿ ಮಿತ್ರ ಮಂಡಲ ರಚನೆ. ಈ ರೀತಿ ಕ್ಷುಲ್ಲಕ ಉದ್ದೇಶದ 12 ಟ್ರಸ್ಟ್‌ಗಳು.

ತನ್ನ ಹೆಸರಿನ ಪ್ರಚಾರದಿಂದ 6 ಕೋಟಿಗೂ ಮೀರಿ ಹಣ ಕೂಡಿಸಿದ ಪ್ರಕರಣ ಬಯಲಿಗೆ ಬಿದ್ದು ಗಲಾಟೆ ಹೆಚ್ಚಾದಾಗ, ತನ್ನ ಹೆಸರನ್ನು ಪ್ರತಿಷ್ಠಾನದಿಂದ ತೆಗೆದುಹಾಕಬೇಕೆಂದು ಇಂದಿರಾಗಾಂಧಿಯ ಸಲಹೆ. ಬಡವರಿಗೆ ಸಹಾಯಮಾಡುವ ಉದ್ದೇಶದಿಂದ ಇಂದಿರಾಗಾಂಧಿ ಪ್ರತಿಭಾ ಪ್ರತಿಷ್ಠಾನ 18-11-80ರಲ್ಲೇ ಸ್ಥಾಪಿಸಲ್ಪಟ್ಟಿದ್ದು, ಇಂದಿರಾಗಾಂಧಿಯವರೇ ಮುಂಬಯಿ ರಾಜಭವನದಲ್ಲಿ ಅದರ ಉದ್ಘಾಟನೆ ನೆರವೇರಿಸಿದ್ದಾರೆಂಬ ವಿಷಯ ಮಹತ್ವದ್ದು. ಹಣ ಕೂಡಿಸಲಿಕ್ಕೆ ಸರಕಾರಿ ಅಧಿಕಾರವನ್ನೂ ಉಪಯೋಗ ಮಾಡಲಾಗಿದೆ. ಸ್ವಯಂ ಸ್ಫೂರ್ತಿಯಿಂದಲೇ ದೇಣಿಗೆ ಸಂಗ್ರಹವಾಗಿದೆಂದು ಅಂತುಳೆಯವರ ವಾದ. ಆದರೆ ನಿಜ ಸಂಗತಿ ಬೇರೆ.

ದೇಣಿಗೆ ಸಂಗ್ರಹಿಸುತ್ತಿರುವುದಾಗಿ ಅಂತುಳೆಯವರು ಒಪ್ಪಿಕೊಂಡಿದ್ದಾರೆ. ಬಡವರಿಗೆ ಸಹಾಯ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು ಸರಕಾರದ ಆದ್ಯ ಕರ್ತವ್ಯ. ಆದರೆ ಅಂತುಳೆಯವರ ಟ್ರಸ್ಟಿನಿಂದಲೇ ಹೆಚ್ಚಿನ ಸೇವಸಲ್ಲಬಹುದೆಂಬ ನಿರೀಕ್ಷೆಯಿಂದ ಮಹಾರಾಷ್ಟ್ರ ಸರಕಾರ ಈ ಟ್ರಸ್ಟಿಗೆ 2 ಕೋಟಿ ರೂಪಾಯಿ ಕೊಟ್ಟಿದೆ. ಸಹಕಾರಿ ಸಕ್ಕರೆ ಕಾರ್ಖಾನೆಗಳಿಂದ ರೂ. 2.6 ಕೋಟಿ, ಸಹಕಾರಿ ಬ್ಯಾಂಕುಗಳಿಂದ ರೂ. 10 ಲಕ್ಷ. ಕಂಟ್ರಾಕ್ಟರು, ಕಾರ್ಖಾನೆ ಮಾಲಕರು, ಇತರ ದಾನಶೂರರಿಂದ ವಗೈರೆ ಉಳಿದ ಹಣ ಸಂಗ್ರಹ. ಈ ಒಂದೇ ಪ್ರತಿಷ್ಠಾನಕ್ಕೆ ಸಾಧಾರಣ 5 ಕೋಟಿಯಷ್ಟು ಹಣ ಸಂಗ್ರಹವಾಗಿದೆಯಂತೆ. ಇನ್ನುಳಿದ ಟ್ರಸ್ಟುಗಳ ಸಂಗ್ರಹವೇ ಬೇರೆ.

ನಾನು 2,500 ಸಿರಿವಂತರ ಯಾದಿ ತಯಾರಿಸಿದ್ದೇನೆ. ಅವರಿಂದ ಚೆಕ್ ಮೂಲಕ ಹಣ ಪಡೆಯುತ್ತೇನೆ. ಮುಂಬಯಿ ಸುಲ್ತಾನನ ಹೆಮ್ಮೆಯ ಮಾತುಗಳಿವು. ರೂ. 65 ಕೋಟಿ ಕೂಡಿಸುತ್ತೇನೆ...ಅಂತುಳೆ ಹೇಳುತ್ತಾರೆ.

ಅವು ಸಾರ್ವಜನಿಕ ಟ್ರಸ್ಟುಗಳಲ್ಲ. ಖಾಸಗಿ ಟ್ರಸ್ಟುಗಳು. ಕಾರಣ ಅಂತುಳೆ ಮುಖ್ಯಮಂತ್ರಿ ಪದದಿಂದ ಕಿತ್ತೊಗೆಯಲ್ಪಟ್ಟರೂ ಈ ಟ್ರಸ್ಟ್‌ಗಳ ಹಣವೆಲ್ಲ ಅಂತುಳೆಯವರ ಆಸ್ತಿಯೆಂಬುದನ್ನು ಸಾರ್ವಜನಿಕರು ತಿಳಿದುಕೊಳ್ಳುವುದಗತ್ಯ.

ಈ ಟ್ರಸ್ಟ್‌ಗಳಿಗೆ ಸ್ವಯಂ ಸ್ಫೂರ್ತಿಯಿಂದಲೇ ಹಣಕೊಡುತ್ತಿದ್ದಾರೆಂದು ಅಂತುಳೆ ವಾದ. ಆದರೆ ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟವಾದ ಸುದ್ದಿ ಈ ಹೇಳಿಕೆಯನ್ನು ಅಲ್ಲಗಳೆಯುತ್ತದೆ. ಅಧಿಕಾರದ ದುರುಪಯೋಗವಾಗುತ್ತಿದೆಂದು ಸಾಬೀತಾಗಿದೆ.

ಮುಂಬಯಿಯಲ್ಲಿ ಒಂದು ಚೀಲ ಸಿಮೆಂಟ್ ಬೆಲೆ (ಕಾಳಸಂತೆಯಲ್ಲಿ) ರೂ. 100ರಿಂದ ರೂ. 145. ಸರಕಾರೀ ಬೆಲೆ ರೂ. 28/- ಅಂತುಳೆ ಮಾರಾಟ ಮಾಡಿದ್ದು ರೂ. 40ರಂತೆ. ಒಟ್ಟು 40,000 ಚೀಲ. ಕನಿಷ್ಠ ರೂ. 100/- ಕೊಡುಕೊಳ್ಳುವ ಕಾಂಟ್ರಾಕ್ಟರರಿಗೆ ಅಂತುಳೆಯವರಿಂದ ರೂ. 40ಕ್ಕೆ ಸಿಮೆಂಟ್ ಸಿಗುವಂತಾದಾಗ ಎಲ್ಲಾ ಕಂಟ್ರಾಕ್ಟರರೂ ಒತ್ತಾಯವಿಲ್ಲದೇ ಟ್ರಸ್ಟಿಗೆ ಧನಸಹಾಯ ಮಾಡುವುದರಲ್ಲಿ ಹಿಂದೇಟು ಹಾಕುತ್ತಾರೆಯೇ ?

ಸಿಮೆಂಟ್ ವಿತರಣೆ, ಕೈಗಾರಿಕೆಗಳಿಗೆ ಬೇಕಾಗುವ ಮಧ್ಯಸಾರ, ಮಧ್ಯಸಾರ ಅಂಗಡಿಗಳಿಗೆ ಲೈಸೆನ್ಸ್ ಕೊಡುವುದು, ಮುಂಬಯಿ ನಗರದಲ್ಲಿ ಖಾಲಿ ಜಾಗಗಳ ಮಾರಾಟ, ಮೊದಲಾದವುಗಳೆಲ್ಲ ಅಂತುಳೆಯವರ ಅಂಕಿತದಲ್ಲೇ. ಕಾಯಿದೆ ಕಾನೂನುಗಳನ್ನೆಲ್ಲ ಗಾಳಿಯಲ್ಲಿ ತೂರಿ ಕೈಗಾರಿಕೆಗಳಿಗೆ ಬೇಕಾಗುವ ಮಧ್ಯಸಾರವನ್ನು ತಮಗೆ ಬೇಕಾದವರಿಗೆ ಮಾರಾಟಮಾಡಿ ದಾನ ಪಡೆಯಲಾಯಿತು.

ಮಹಾರಾಷ್ಟ್ರ ಮಧ್ಯಸಾರ ಮಾರಾಟಗಾರರು ಹೊಸ ವರ್ಷದ ಲೈಸೆನ್ಸ್ ಪಡೆದಾಗ ರೂ. 25ಲಕ್ಷ ಬಡವರ ಟ್ರಸ್ಟಿಗೆ ದಾನ ಮಾಡಿದರು. ಈಗ ಮಂತ್ರಿ ಸ್ಥಾನದಿಂದ ಕಿತ್ತೊಗೆಯಲ್ಪಟ್ಟ ಶಾಲಿನೀಬಾಯಿ ಪಾಟೀಲರ ಶೇತಕರಿ ಸಹಕಾರಿ ಸಕ್ಕರೆ ಕಾರ್ಖಾನೆಯನ್ನೊಳಗೊಂಡು ಎಲ್ಲ ಸಹಕಾರಿ ಸಕ್ಕರೆ ಕಾರ್ಖಾನೆದಾರರು ರೂ. 4.5 ಕೋಟಿ ರೂಪಾಯಿ ಕೊಡಲೊಪ್ಪಿದ್ದಾರೆ.

ಎಲ್ಲ ಕಾನೂನುಗಳನ್ನು ತಿರಸ್ಕರಿಸಿ, ಶ್ರೀಮಂತರಿಗೆ ಕಟ್ಟಡ ಕಟ್ಟಲು ಅವಕಾಶ ಮಾಡಿಕೊಟ್ಟಿದ್ದರಿಂದ, ಅವರಿಂದ ತನ್ನ ಟ್ರಸ್ಟಿಗೆ ರೂ. 9ಕೋಟಿ ಸಿಕ್ಕಿದೆ. ಇದರಂತೆಯೇ ಸಕ್ಕರೆ ಕಾರ್ಖಾನೆದಾರರು ಕಬ್ಬು ಬೆಳೆದವರಿಂದ ಒತ್ತಾಯವಾಗಿ ಹಣ ಕೂಡಿಸಿ ಟ್ರಸ್ಟಿಗೆ ಕೊಟ್ಟಿದ್ದಾರೆ. ಅಂತುಳೆ ಹೇಳಿಕೆ ಪ್ರಕಾರ ಇದೆಲ್ಲ ಶ್ರೀಮಂತರ ಹಣ, ಆದರೆ ಬಡವರ ಉದ್ಧಾರಕ್ಕಾಗಿ. ಎಲ್ಲ ಇಂದಿರನ ಪ್ರತಿಭೆಗೆ.

ಕೊಂಕಣದಲ್ಲಿ ಪ್ರತಿ ಸಾಯಂಕಾಲ ಸಾಂಸ್ಕೃತಿಕ ಚಟುವಟಿಕೆ ನಡೆಸಲು ಒಂದು ಟ್ರಸ್ಟ್ ಸ್ಥಾಪನೆಯಾಗಿದೆ. ಮುಂಬಯಿಯಲ್ಲಿ ಅದರ ವಾಸ. 11-4-81ರಂದು ಈ ಟ್ರಸ್ಟಿನವರು ಮುಂಬಯಿ ಆದಾಯ ತೆರಿಗೆ ಕಮೀಷನರಿಗೊಂದು ಪತ್ರ ಬರೆದು ತಮಗೆ ಆದಾಯ ತೆರಿಗೆಯಿಂದ ವಿನಾಯಿತಿ ಸಿಗಬೇಕೆಂದು ಕೇಳಿಕೊಂಡಾಗ ಬಡವರ ಉದ್ಧಾರದ ಸಲುವಾಗಿ ಆದಾಯ ತೆರಿಗೆಯಿಂದ ವಿನಾಯಿತಿ ಸಿಕ್ಕಿದೆ. ಅದು ಎಷ್ಟು ಹಣ ಗೊತ್ತೇ? ಮುಂದಿನ ಮೂರು ವರ್ಷಕ್ಕೆ 97 ಕೋಟಿ ರೂಪಾಯಿ ಉಳಿತಾಯ.

ಕಳ್ಳಸಂತೆ ಮಾಡುವವರನ್ನು ಅತ್ಯಾವಶ್ಯಕ ವಸ್ತುಗಳ ಕಾಯಿದೆ ಮೂಲಕ ಹಿಡಿದು ಹಾಕಿಯೇತೀರುತ್ತೇವೆಂದು ಇಂದಿರಾಗಾಂಧಿ, ವೆಂಕಟರಾಮನ್ ರಾತ್ರಿ ಹಗಲು ಘೋಷಿಸುತ್ತಲೇ ಇದ್ದಾರೆ. ಮುಂಬಯಿಯಲ್ಲಿ ಸಿಮೆಂಟ್ ತುಟ್ಟಾಗ್ರತೆಯನ್ನುಂಟುಮಾಡಿ ರೂ. 28 ಬೆಲೆಯ ಸಿಮೆಂಟನ್ನು ರೂ. 40ರಂತೆ ಮಾರಾಟ ಮಾಡಿದ ಅಂತುಳೆಯವರನ್ನು ಹಿಡಿದು 2ವರ್ಷ ಜೈಲಿಗಟ್ಟುವ ಧೈರ್ಯ ಯಾರಿಗಿದೆ? ಇಂದಿರಾ ರಾಜ್ಯದಲ್ಲಿ ಜನರಿಗೊಂದು ಕಾನೂನು, ಆಳುವವರಿಗೊಂದು ಕಾನೂನಲ್ಲವೇ? ಅಂತುಳೆ ಬ್ಲ್ಯಾಕ್ ಮಾರ್ಕೆಟ್ ಮಾಡಿದ್ದು ಇಂದಿರನ, ಬಡವರ ಉದ್ಧಾರದ ಹೆಸರಲ್ಲಿ! ಆದ ಕಾರಣ "ಬಾರಾಖೂನ" ಮಾಫ ಮಾಡಲಾಗಿದೆ. ಆದರೆ ಜನತೆ ಮಾತ್ರ ಈ ಕೊಲೆಗಡುಕರನ್ನೂ, ಅವರಿಗೆ ಬೆಂಬಲ ನೀಡುತ್ತಿರುವ ದಿಲ್ಲಿ ರಾಣಿಯನ್ನೂ ಕ್ಷಮಿಸಲು ಸಾಧ್ಯವಿಲ್ಲ. ಆದರೆ ಇಂದಿರಾ ಆಡಳಿತೆಯ ವೈಖರಿಯೇ ಅಂತುಳೆ ಹಣ ಸಂಗ್ರಹದ ವೈಖರಿ. ಇದನ್ನೆಲ್ಲ ಮಣ್ಣು ಮುಕ್ಕಿಸಲಿಕ್ಕೆ ಜನ ತಯಾರಾಗಬೇಕು.

ಕಬ್ಬು ಬೆಳೆಯುವವರಿಂದಲೂ ಸುಲಿಗೆ?

ಇಂದಿರಾಗಾಂಧಿ ಹೆಸರಲ್ಲಿ ಮಹಾರಾಷ್ಟ್ರದ ಕಬ್ಬು ಬೆಳೆಯುವವರಿಂದಲೂ ಸುಲಿಗೆ ನಡೆಯಿತು. ಒಟ್ಟು 4.5 ಕೋಟಿರೂಪಾಯಿ. ಕಬ್ಬು ಬೆಳೆಯುವ ರೈತರಿಂದ ವಸೂಲ್ಮಾಡಲ್ಪಟ್ಟ ಹಣವನ್ನೆಲ್ಲ ವಾಪಸ್ ಮಾಡಬೇಕೆಂದು ಕ್ಯಾಬಿನೆಟ್ ಮಂತ್ರಿ ಶಾಲಿನೀಬಾಯಿ ಪಾಟೀಲರ ವಾದ. ಹಣ ವಾಪಸಾಗಲಿಲ್ಲ ರೈತರಿಗೆ. ಆದರೆ ಶಾಲಿನೀಬಾಯಿಯವರನ್ನೇ ವಜಾಮಾಡಿತು ಮಂತ್ರಿಮಂಡಲದಿಂದ ಇಂದಿರಾ ಹೈಕಮಾಂಡ್. ಇದನ್ನು ಸಮರ್ಥಿಸಿದರು ಶಾಲಿನೀ ಬಾಯಿ ಗಂಡ, ಇಂದಿರಾ ಕಾಂಗ್ರೆಸ್ ಕಾರ್ಯದರ್ಶಿ ವಸಂತ ರಾವ್ ದಾದಾ ಪಾಟೀಲ.

ಕಬ್ಬು ಬೆಳೆಗಾರರ ಸುಲಿಗೆಯ ವೈಖರಿ ನೋಡಿದಿರಾ! ಸರಕಾರದ ಹುಕುಂ ಏನು? ಶೇ. 10ರಷ್ಟು ಕಬ್ಬು ಅರೆದರೆ ಒಂದು ಟನ್ನಿಗೆ ರೂ. 1.75 ಅಂತುಳೆಯವರ ಬಡವರ ನಿಧಿಗೆ ಕೊಡಬೇಕು. ಶೇ.10.75 ರಷ್ಟಾದರೆ ಟನ್ನಿಗೆ ರೂ. 2/-, ಶೇ. 11.5ರಷ್ಟಾದರೆ ರೂ. 2.25 ಶೇ. 11.5ಕ್ಕಿಂತ ಹೆಚ್ಚಾದರೆ ಟನ್ನಿಗೆ ರೂ. 2.50. ಪ್ರತಿವರ್ಷ ಮಹಾರಾಷ್ಟ್ರದಲ್ಲಿ 200 ಲಕ್ಷ ಟನ್ ಕಬ್ಬನ್ನು ಸಕ್ಕರೆ ಕಾರ್ಖಾನೆದಾರರು ಅರೆಯುತ್ತಾರೆ. ಸರ್ವಸಾಧಾರಣ ಒಂದು ಟನ್ನಿಗೆ ರೂ. 2.25 ಹಿಡಿದರೂ ರೂ. 4.5 ಕೋಟಿ ಬಡವರಿಗಾಗಿ ದಾನ ಮಾಡಲಾಗಿದೆ.

–ಎನ್ಕೆ

ಸುಲಿಗೆ ಖೋರರಿಗೆ ಕೇಂದ್ರ ಸರಕಾರದ ಬೆಂಬಲ

ಅಂತುಳೆಯವರು ಇಂದಿರಾ ಪ್ರತಿಷ್ಠಾನದ ಮೂಲಕ ಹಣ ಕೂಡಿಸುತ್ತಿರುವುದನ್ನೂ ಹಾಗೆಯೇ ಆದಾಯ ತೆರಿಗೆ ಅಧಿಕಾರಿಗಳು ಈ ಟ್ರಸ್ಟುಗಳಿಗೆ ನೀಡಿದ ಆದಾಯ ತೆರಿಗೆ ವಿನಾಯಿತಿಯನ್ನೂ ಕೇಂದ್ರ ಹಣಕಾಸು ಸಚಿವ ವೆಂಕಟರಾಮನ್ ಸಮರ್ಥಿಸಿದ್ದಾರೆ ಲೋಕಸಭೆಯಲ್ಲಿ.

ಮಹಾರಾಷ್ಟ್ರದ ಠಾಣೆ, ರಾಯಗಢ, ಮತ್ತು ರತ್ನಗಿರಿ ಜಿಲ್ಲೆಗಳಲ್ಲಿ ಗ್ರಾಮಾಭಿವೃದ್ಧಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದು ಕೊಂಕಣ ಉನ್ನತಿ ಮಿತ್ರ ಮಂಡಳಿಯ ಮುಖ್ಯ ಉದ್ದೇಶವೆಂದೂ ಈ 3 ಜಿಲ್ಲೆಗಳ 4785 ಗ್ರಾಮಗಳಿಗಾಗಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಈ ಸಂಸ್ಥೆ ರೂಪಿಸುವುದೆಂದೂ ಹೇಳಿದ್ದಾರೆ.

ಹಾಗಾದರೆ ಜಿಲ್ಲಾ ಅಭಿವೃದ್ಧಿ ಮಂಡಲಿ, ಗ್ರಾಮ ಪಂಚಾಯಿತಿಗಳು ಯಾಕೆ ಬೇಕು? ಈ ಜಿಲ್ಲೆಗಳಲ್ಲಿ ಅಂತುಳೆ ಸರಕಾರದ ಕರ್ತವ್ಯವೇನು? ಇಂದಿರಾ ಹೆಸರಲ್ಲಿ ಅಂತುಳೆಯವರು ಪ್ರತಿ ಸರಕಾರ ನಡೆಸುತ್ತಿದ್ದಾರೆಯೇ? ವೆಂಕಟರಾಮನ್ನರು ಈ ಪ್ರತಿ ಸರ್ಕಾರದ ಕಾರ್ಯಕ್ರಮಕ್ಕೆ ಸಿಕ್ಕ ಒತ್ತುತ್ತಿದ್ದಾರಲ್ಲ! ನಕ್ಸಲ್ಯಾಟರು ಇದನ್ನು ನೋಡಿ ನಾಚಿಕೊಳ್ಳುವಂತಾಗುತ್ತದೆಯೇ? ಓದುಗರೇ ವಿಚಾರಮಾಡಿರಿ.

ಕರ್ನಾಟಕದ ಮುಖ್ಯಮಂತ್ರಿ ಗುಂಡೂರಾಯರ ಪತ್ನಿ ವರಲಕ್ಷ್ಮಿಯವರೂ ಭಾರತಿ ವೃಂದವೆಂಬ ಸಾಂಸ್ಕೃತಿಕ ಮತ್ತು ಸಾಮಾಜಿಕ ಸಂಸ್ಥೆಯೊಂದಕ್ಕೆ 10 ಲಕ್ಷ ರೂಪಾಯಿ ಕಾಣಿಕೆಯಾಗಿ ಸಂಗ್ರಹಿಸಿದ್ದಾರಂತೆ. ಇದರಂತೆಯೇ ಬೇರೆ ಯಾವ ಮುಖ್ಯಮಂತ್ರಿಯವರೂ, ಮುಖ್ಯಮಂತ್ರಿ ಪತ್ನಿಯವರೂ, ಜೊತೆಯಲ್ಲೇ ಮುಖ್ಯಮಂತ್ರಿಯವರ ಆಪ್ತ ಅಧಿಕಾರಿಗಳ ಧರ್ಮಪತ್ನಿಯರೂ ಇಂಥದ್ದೇ 'ಟ್ರಸ್ಟ್' "ವೃಂದ"ಗಳ ಮೂಲಕ "ಕಾಣಿಕೆ" ಕೂಡಿಸಿ ಬಡವರ ಉದ್ಧಾರಕ್ಕೆ ಕೈಚಾಚಿದ್ದಾರೋ, ಚಾಚಲು ಪ್ರಾರಂಭಿಸಿದ್ದಾರೋ ಎಂಬ ಸಂಗತಿ ಒಂದೊಂದಾಗಿ ಬೆಳಕು ಕಂಡರೆ ಆಶ್ಚರ್ಯವಿಲ್ಲ. ಅದನ್ನೆಲ್ಲ ನೋಡಲೂ ತಯಾರಾಗೋಣ, ವಿರೋಧಿಸಲೂ ಸಿದ್ಧರಾಗೋಣ. ಅದಕ್ಕೆಲ್ಲ ಸಂಬಂಧಪಟ್ಟವರನ್ನು ಅಧಿಕಾರದಿಂದ ಕಿತ್ತೊಗೆಯಲೂ ಅಣಿಮಾಡೋಣ. ಇದು ಜನತೆಯ ಕರ್ತವ್ಯವಲ್ಲವೇ ?

ಆರ್. ಚಂದ್ರ

ಆರ್ಥಿಕ ಸಮೀಕ್ಷೆ:

ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಯಿಂದ ರೂ. 5500 ಕೋಟಿ ಸಾಲ!

ಸ್ವಾಭಿಮಾನ, ಸ್ವಾವಲಂಬನೆ, ಸಾರ್ವಭೌಮತೆಗೆ ಅಪಾಯ!

ಗುಪ್ತ ಸಂಧಾನ

ಜುಲೈ ತಿಂಗಳ ಅಂತ್ಯದಲ್ಲಿ ಬ್ರಿಟಿಷ್ ರಾಜಕುಮಾರನ ಮದುವೆಯ ಗದ್ದಲದಲ್ಲಿ ಭಾರತ ಸರಕಾರದ ಅಧಿಕಾರಿಗಳು ಲಂಡನ್‌ನಲ್ಲಿ ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಯಿಂದ (ಐಎಂಎಫ್) ಭಾರೀ ಮೊತ್ತದ ಸಾಲ ಎತ್ತುವ ಗುಪ್ತಸಂಧಾನ ನಡೆಸಿದರು. ಮುಂದೆ, ಅಮೇರಿಕದ ವಾಷಿಂಗ್‌ಟನ್‌ನಲ್ಲಿ ಇನ್ನಷ್ಟು ಗುಪ್ತಸಂಧಾನ ನಡೆದು, ತಾ. 17-8-81ರಂದು ಇಂದಿರಾ ಸರಕಾರ ರೂ. 5500 ಕೋಟಿ ವಿದೇಶಿ ಹೊಸ ಸಾಲಕ್ಕೆ ಅನುಮತಿಯನ್ನು ಕೊಟ್ಟಿತು. ಈ ಸಾಲ ಅಂತರರಾಷ್ಟ್ರೀಯ ಹಣಕಾಸು ವ್ಯವಹಾರಗಳಲ್ಲಿಯೇ ಅತ್ಯಂತ ದೊಡ್ಡದು! ಈಗಾಗಲೇ ನಮ್ಮ ವಿದೇಶಿ ಸಾಲದ ಹೊರೆಯು ರೂ. 13,479 ಕೋಟಿಯಾಗಿದ್ದು (31-3-81ರಂದು), ದೇಶದ 68 ಕೋಟಿ ಜನಸಂಖ್ಯೆಯ ಸರಾಸರಿ ವಿದೇಶಿ ಸಾಲದ ಹೊರೆಯು ರೂ. 200ರಷ್ಟಾಗಿದ್ದು, ಇನ್ನೂ ಬೃಹತ್ ಪ್ರಮಾಣದಲ್ಲಿ ರೂ. 5500 ಕೋಟಿಯಷ್ಟು ಸಾಲ ಪಡೆಯಲು ಕಾರಣವೇನು? ಈ ಸಾಲದ ಶರತ್ತುಗಳೇನು? ಈ ಸಾಲದ ಶರತ್ತುಗಳನ್ನು ಸಾರ್ವಜನಿಕರಿಗಾಗಲೀ, ಸಂಸತ್ತಿಗಾಗಲೀ ಬಹಿರಂಗಗೊಳಿಸದೆ, ಅವರ ವಿಶ್ವಾಸ ಪಡೆಯದೆ, ಇನ್ನೂ ಗೋಪ್ಯವಾಗಿಡಲು ಕಾರಣವೇನು?

ಪ್ರಧಾನಿಯವರಾಗಲೀ, ಹಣಕಾಸು ಮಂತ್ರಿಯಾಗಲೀ, ಸರಕಾರದ ಅಧಿಕಾರಿಗಳಾಗಲೀ, ಈ ಪ್ರಶ್ನೆಗಳಿಗೆ ಸ್ಪಷ್ಟ ಉತ್ತರ ಕೊಡಲಾರರು. ಜನರನ್ನು ಮತ್ತು ಸಂಸತ್ ಸದಸ್ಯರನ್ನು ಸಮಾಧಾನಗೊಳಿಸುವ ಕೆಲವು ಥಾರಿಕೆಯ ಉತ್ತರಗಳು ಸಿಗುತ್ತಿವೆ ಅಷ್ಟೆ. ಆದರೆ, ಈ ಸಾಲದ ಹಿಂದೆ ದೇಶದ ಆರ್ಥಿಕ ಸ್ಥಿತಿಯು ತೀವ್ರ ಹದಗೆಡುತ್ತಿರುವುದನ್ನೂ; ಅದನ್ನು ಹೋಗಲಾಡಿಸಲು ಬಂಡವಾಳಶಾಹಿ-ಭೂಮಾಲೀಕ ಹಿತಾಸಕ್ತಿಗಳನ್ನು ಪ್ರತಿನಿಧಿಸುತ್ತಿರುವ ಇಂದಿರಾ ಸರಕಾರ ದೇಶದ ಪ್ರಜಾಪ್ರಭುತ್ವ, ಸ್ವಾಭಿಮಾನ, ಸ್ವಾವಲಂಬನೆ, ಸಾರ್ವಭೌಮತೆಯನ್ನು ಅಪಾಯದ ಅಂಚಿಗೆ ತಳ್ಳುತ್ತಿರುವುದನ್ನೂ ಗಮನಿಸಬೇಕು.

IMF ಸಾಮ್ರಾಜ್ಯಶಾಹಿ ರಾಷ್ಟ್ರಗಳ ಬ್ಯಾಂಕ್

ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಯು ಅಮೇರಿಕದ ಮತ್ತು ಯೂರೋಪಿನ ಸಾಮ್ರಾಜ್ಯಶಾಹಿ ರಾಷ್ಟ್ರಗಳ ನಿಯಂತ್ರಣದಲ್ಲಿ ವ್ಯವಹರಿಸುತ್ತಿದೆ. ಅಮೇರಿಕ ದೇಶ ಒಂದೇ ಈ ಸಂಸ್ಥೆಯಲ್ಲಿ ಶೇ. 20ಕ್ಕಿಂತಲೂ ಹೆಚ್ಚು ಬಂಡವಾಳ ಹೂಡಿದೆ. ಸಹಜವಾಗಿಯೇ ಈ ಸಂಸ್ಥೆ (ಐಎಂಎಫ್), ಜಾಗತಿಕ ಬ್ಯಾಂಕು (ಐಬಿಆರ್‌ಡಿ), ಅಂತರರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆ (ಐಡಿಎ), ಇತ್ಯಾದಿ ಹಣಕಾಸು ಸಂಸ್ಥೆಗಳು ಸಾಮ್ರಾಜ್ಯಶಾಹಿ ರಾಷ್ಟ್ರಗಳ ಆರ್ಥಿಕ-ರಾಜಕೀಯ ಹಿತಾಸಕ್ತಿಗಳಿಗನುಗುಣವಾಗಿಯೇ ವ್ಯವಹರಿಸುತ್ತಿವೆ. ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ಬಡರಾಷ್ಟ್ರಗಳನ್ನು ಈ ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳು ತಮ್ಮ ಸಾಲ ಸಹಾಯಗಳಿಂದ ಸಾಮ್ರಾಜ್ಯಶಾಹಿ ರಾಷ್ಟ್ರಗಳ ಅಧೀನ ರಾಷ್ಟ್ರಗಳನ್ನಾಗಿಸುತ್ತಿವೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಸ್ವಾಭಿಮಾನ, ಸ್ವಾವಲಂಬನೆ, ಸಾರ್ವಭೌಮತೆಯನ್ನೇ ಕಬಳಿಸುತ್ತಿವೆ!

ವಿದೇಶಿ ಸಾಲದ ಹೊರೆ

ಭಾರತದ ಒಟ್ಟು ರೂ. 13479 ಕೋಟಿ ವಿದೇಶಿ ಸಾಲದಲ್ಲಿ ಶೇ. 92 ರಷ್ಟು ಬಂಡವಾಳಶಾಹಿ ರಾಷ್ಟ್ರಗಳಿಂದ ಬಂದದ್ದು; ಉಳಿದ ಶೇ. 8ರಷ್ಟೇ ಸಮಾಜವಾದಿ ರಾಷ್ಟ್ರಗಳಿಂದ ಬಂದದ್ದು. ನಮ್ಮ ದೇಶದ ಆರ್ಥಿಕ ಅಭಿವೃದ್ಧಿ, ಪಂಚವಾರ್ಷಿಕ ಯೋಜನೆಗಳು ಬಂಡವಾಳಶಾಹಿಗಳ ಮತ್ತು ಭೂಮಾಲೀಕರ ಲಾಭಗಳಿಕೆಯನ್ನೂ ಆಸ್ತಿ ಆದಾಯಗಳನ್ನೂ ಹೆಚ್ಚಿಸುವ ಮೂಲೋದ್ದೇಶ ಹೊಂದಿವೆ. ಬೃಹತ್ ಪ್ರಮಾಣದ ವಿದೇಶಿ ಸಾಲವೂ ಅದೇ ಉದ್ದೇಶಕ್ಕಾಗಿದೆ. ಆದರೆ, ವಿದೇಶಿ ಸಾಲ ಮತ್ತದರ ಬಡ್ಡಿಯನ್ನು ತೀರಿಸಲು, ವಿದೇಶದಿಂದ ಆಮದು ಮಾಡಿಕೊಳ್ಳುತ್ತಿರುವ ವಸ್ತುಗಳ ಹಾಗೂ ಸೇವಾ ಸೌಲಭ್ಯಗಳ ಬೆಲೆ ತೆರಲು, ನಮ್ಮ ರಫ್ತುವ್ಯಾಪಾರದ ಗಳಿಕೆಯು ಸಾಕಾಗುತ್ತಿಲ್ಲ. ನಮ್ಮ ರಫ್ತುವ್ಯಾಪಾರದ ಗಳಿಕೆಯು ಆಮದು ಬೆಲೆಗಿಂತ ಕಡಿಮೆಯಾಗಿ, ವಿದೇಶಿ ವ್ಯಾಪಾರದಲ್ಲಿ ಕೊರತೆ ಉಂಟಾಗುತ್ತಿದೆ. ಕೊರತೆ ನೀಗಿಸಲು ಸಾಕಷ್ಟು ವಿದೇಶಿ ವಿನಿಮಯ ಗಳಿಕೆಯೂ ಆಗುತ್ತಿಲ್ಲ. ಆದುದರಿಂದ, ನಿರಂತರವಾಗಿ ವಿದೇಶಿ ವ್ಯಾಪಾರದ ಕೊರತೆಯನ್ನು ನೀಗಿಸಲು ತಾತ್ಕಾಲಿಕ ಹಾಗೂ ದೀರ್ಘಕಾಲಿಕ ವಿದೇಶಿ ಸಾಲ ಪಡೆಯಬೇಕಾಗುತ್ತಿದೆ. ಹಳೆ ಸಾಲವನ್ನು ಹೊಸ ಸಾಲದಿಂದ ತೀರಿಸುವುದರೊಂದಿಗೆ ಇಷ್ಟು ವರ್ಷಗಳಲ್ಲಿ ಸಾಲದ ಒಟ್ಟು ಹೊರೆ ಹೆಚ್ಚುತ್ತಾ ಬಂದಿದೆ! ಸಾಲಕೊಟ್ಟ ರಾಷ್ಟ್ರಗಳು ಶ್ರೀಮಂತವಾಗುತ್ತಿವೆ, ಸಾಲಪಡೆದ ರಾಷ್ಟ್ರಗಳು ಬಡವಾಗುತ್ತಿವೆ!

ವಿದೇಶಿ ವ್ಯಾಪಾರದಲ್ಲಿ ಕೊರತೆ

ಇತ್ತೀಚೆಗಿನ ವರ್ಷಗಳಲ್ಲಿ ನಮ್ಮ ವಿದೇಶಿ ವ್ಯಾಪಾರದ ಕೊರತೆಯು ಹೆಚ್ಚುತ್ತಿದೆ. 1978-79: ರೂ. 1089 ಕೋಟಿ; 1979-80: ರೂ. 2368 ಕೋಟಿ; 1980-81: ರೂ. 5205 ಕೋಟಿ ಕೊರತೆ! 1980-81ರಲ್ಲಿ ನಮ್ಮ ರಫ್ತು ಮೌಲ್ಯ ರೂ. 6578 ಕೋಟಿಯಾಗಿದ್ದು, ಆಮದು ಮೌಲ್ಯ ರೂ. 11783 ಕೋಟಿಯಾಗಿದ್ದು, ರಫ್ತು ನಿರೀಕ್ಷೆಗಿಂತ ಕಡಿಮೆಯಾಗಿ, ಆಮದು ನಿರೀಕ್ಷೆಗಿಂತ ಹೆಚ್ಚಾಗಿ, ಕೊರತೆಯೂ ನಿರೀಕ್ಷೆಗಿಂತ ಹೆಚ್ಚಾಗಿದೆ. ಆರನೇ ಯೋಜನೆ (1980-85)ಯಲ್ಲಿ ನಮ್ಮ ರಫ್ತು ವ್ಯಾಪಾರ ಶೇ. 9ರಷ್ಟು ಹೆಚ್ಚಾಗಬೇಕೆಂದಿದ್ದರೂ, ಯೋಜನೆಯ ಮೊದಲ ವರ್ಷದಲ್ಲಿಯೇ (1980-81)ರಫ್ತು ಹಿಂದಿನ ವರ್ಷಕ್ಕಿಂತ ಕಡಿಮೆ ಆಗಿದೆ. ಮುಂಬರುವ ವಿದೇಶಿ ವ್ಯಾಪಾರದ ಕೊರತೆಯನ್ನು ನೀಗಿಸಲು ರೂ. 5500 ಕೋಟಿಯ ಬೃಹತ್ ಪ್ರಮಾಣದ ಹೊಸ ಸಾಲ!

ಕಳೆದ ವರ್ಷ ಇದೇ ಸಂಸ್ಥೆಯಿಂದ ಸುಮಾರು ರೂ. 900 ಕೋಟಿ ಸಾಲ ಪಡೆಯಲಾಗಿತ್ತು. ಈ ವರ್ಷ ಅಂತರರಾಷ್ಟ್ರೀಯ ಹಣಕಾಸು ಮಾರುಕಟ್ಟೆಯಿಂದ ರೂ. 900 ಕೋಟಿ ಸಾಲ ಪಡೆಯಲಾಗಿತ್ತು. ಆದರೆ, ಈ ಬೃಹತ್ ಹೊಸ ಸಾಲ ನಮ್ಮ ಆಮದಿನ ಅರ್ಧಾಂಶದಷ್ಟಾಗಿದೆ, ರಫ್ತಿನ 5/6 ರಷ್ಟಾಗಿದೆ, ಈಗಿನ ವಿದೇಶಿ ವಿನಿಮಯ ಸಂಗ್ರಹದಷ್ಟಾಗಿದೆ. ಇಷ್ಟೊಂದು ಮೊತ್ತದ ಸಾಲವನ್ನು ಇದುವರೆಗೆ ಈ ಸಂಸ್ಥೆಯಿಂದ ಯಾವ ದೇಶವೂ ಪಡೆದಿರಲಿಲ್ಲ!

ಹೊಸ ಸಾಲದ ಕಠಿಣ ಶರತ್ತುಗಳು

ಈ ಹೊಸ ಸಾಲದ ಹಣವನ್ನು ಮುಂದಿನ ಮೂರು ವರ್ಷಗಳಲ್ಲಿ ಪಡೆಯಬಹುದು. ಸಾಲದ ಅರ್ಧಾಂಶಕ್ಕೆ ಶೇ. 6ರಷ್ಟು ಬಡ್ಡಿ ತರಬೇಕು, ಉಳಿದಅರ್ಧಾಂಶಕ್ಕೆ ಅಂತರರಾಷ್ಟ್ರೀಯ ಹಣಕಾಸು ಮಾರುಕಟ್ಟೆಯ ದರದಲ್ಲಿ ಅಂದರೆ ಶೇ. 20ರಷ್ಟು ಬಡ್ಡಿ ತೆರಬೇಕು! ಮೂರು ವರ್ಷಗಳ ನಂತರ ಈ ಸಾಲವನ್ನು ಮುಂದಿನ ಏಳು ವರ್ಷಗಳಲ್ಲಿ ಮರುಪಾವತಿ ಮಾಡಬೇಕು. ಇದುವರೆಗಿನ ಅನುಭವದಂತೆ, ಈ ದುಬಾರಿ ಬಡ್ಡಿಯ ಬೃಹತ್ ಪ್ರಮಾಣದ ಸಾಲ ಪಡೆಯಲು ಕಠಿಣ ಶರತ್ತುಗಳಿಗೆ ಶರಣಾಗಬೇಕಾಗುವುದು. ದೇಶದ ಆರ್ಥಿಕ ನೀತಿಯನ್ನು ಸಾಲದ ಅವಧಿಯ ಉದ್ದಕ್ಕೂ ಅಂತರರಾಷ್ಟ್ರೀಯ ಹಣಕಾಸುಸಂಸ್ಥೆಯು ನಿರ್ದೇಶಿಸಿದಂತೆ ಮೂಲಭೂತವಾಗಿ ಬದಲಾಯಿಸಬೇಕಾಗುವುದು.

ಮುಖ್ಯವಾಗಿ, ಸರಕಾರಿ ವೆಚ್ಚದಲ್ಲಿ ಕಡಿತ; ಬ್ಯಾಂಕು ಸಾಲ ನೀಡಿಕೆಯಲ್ಲಿ ನಿಯಂತ್ರಣ; ಸಾರ್ವಜನಿಕ ರಂಗದ ಕೈಗಾರಿಕೋತ್ಪಾದನೆಗಳಿಗೆ ಬೆಲೆ ಹೆಚ್ಚಳ; ಖಾಸಗೀರಂಗದ ರಫ್ತು ಕೈಗಾರಿಕೋದ್ಯಮಗಳ ಕುರಿತು ಉದಾರ ಧೋರಣೆ; ದೇಶದ ಆಮದು ಮತ್ತು ವಿದೇಶಿ ಬಂಡವಾಳ ಹೂಡುವಿಕೆಯ ಮೇಲಿನ ನಿಯಂತ್ರಣ ರದ್ದತಿ; ಕಾರ್ಮಿಕಶಿಸ್ತು ಮತ್ತು ವೇತನ ಸ್ಥಂಭನ; ದೇಶೀಯ ನಾಣ್ಯದ ಅಪಮೌಲ್ಯ; ಹೊಸ ಸಾಲ ಎತ್ತಲು ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಯ ಪೂರ್ವಸಮ್ಮತಿ ಇತ್ಯಾದಿ ಶರತ್ತುಗಳಿಗೆ ಶರಣಾಗುವುದರಿಂದ ನಮ್ಮ ಸ್ವಾತಂತ್ರ್ಯ, ಸ್ವಾಭಿಮಾನ, ಸ್ವಾವಲಂಬನೆಯನ್ನು ಬಲಿಕೊಟ್ಟಂತಾಗುವುದು. ಇಂತಹ ರಾಷ್ಟ್ರಘಾತುಕ ಅಂತರರಾಷ್ಟ್ರೀಯ ಸಾಲ ಪಡೆಯುವುದನ್ನು ಪ. ಬಂಗಾಳದ ಹಣಕಾಸು ಮಂತ್ರಿ ಡಾ॥ ಅಶೋಕಮಿತ್ರ ಹಾಗೂ ದೇಶದ ಪ್ರಸಿದ್ಧ 23 ಅರ್ಥಶಾಸ್ತ್ರ ತಜ್ಞರು ಕಲ್ಕತ್ತದಲ್ಲಿ ಇತ್ತೀಚೆಗೆ ನಡೆದ ಒಂದು ಸಮ್ಮೇಳನದಲ್ಲಿ ಕಟುವಾಗಿ ಟೀಕಿಸಿರುವರು.

ರೂಪಾಯಿ ಅಪಮೌಲ್ಯ ಸಾರ್ವಭೌಮತೆಗೆ ಅಪಾಯ

ಆದರೆ, ಇವಾವುದನ್ನೂ ಲಕ್ಷಿಸದೆ, ಇಂದಿರಾ ಸರಕಾರ ಕಳೆದ ಜುಲೈ ತಿಂಗಳಿನಿಂದ ಹಣದುಬ್ಬರವನ್ನು ತಡೆಯುವ ನೆಪದಲ್ಲಿ ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಯಿಂದ ಭಾರೀ ಸಾಲ ಪಡೆಯಲು ಪೂರ್ವಭಾವಿಯಾಗಿ ಒಂದಾದಮೇಲೊಂದರಂತೆ ಅಗತ್ಯದ ಕ್ರಮ ಕೈಗೊಳ್ಳುತ್ತಿದೆ. ಪೆಟ್ರೋಲಿಯಂ, ರಸಗೊಬ್ಬರ, ಸಿಮೆಂಟ್, ಉಕ್ಕು ಇತ್ಯಾದಿಗಳ ಬೆಲೆಹೆಚ್ಚಳ; ಬ್ಯಾಂಕು ಬಡ್ಡಿದರ ಹೆಚ್ಚಳ; ಆದಾಯ ತೆರಿಗೆದಾರರ ಕಡ್ಡಾಯ ಠೇವಣಿ ಹೆಚ್ಚಳ; ತುಟ್ಟಿಭತ್ತೆ ನೀಡಲು ಮತ್ತು ವೇತನ ಹೆಚ್ಚಿಸಲು ತಡೆ; ಮುಷ್ಕರ ನಿಷೇಧಿಸುವ ಆಧ್ಯಾದೇಶ; ರಫ್ತು ವ್ಯಾಪಾರೋದ್ಯಮಿಗಳಿಗೆ ಹೆಚ್ಚಿನ ಪ್ರೋತ್ಸಾಹ; ವಿದೇಶಿ ಬಂಡವಾಳ ಹೂಡುವಿಕೆಗೆ, ಸ್ವದೇಶಿ ಗುತ್ತೇದಾರಿ ಕೈಗಾರಿಕೋದ್ಯಮಿಗಳಿಗೆ ಪ್ರೋತ್ಸಾಹ ಇತ್ಯಾದಿ ಕ್ರಮಗಳನ್ನು ಈಗಾಗಲೇ ಕೈಗೊಂಡಾಗಿದೆ.

ಇನ್ನು ಉಳಿದಿರುವುದು ರೂಪಾಯಿಯ ಅಪಮೌಲ್ಯ ಮಾತ್ರ! ಈ ಶರತ್ತುಗಳನ್ನು ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆ ವಿಧಿಸಿಲ್ಲ ಎಂದು ಕೇಂದ್ರ ಹಣಕಾಸು ಮಂತ್ರಿ ಎಷ್ಟು ಆಶ್ವಾಸನೆ ಕೊಟ್ಟರೂ, ಸ್ವಲ್ಪ ಸಮಯದಲ್ಲಿಯೇ ಆ ಕ್ರಮವನ್ನು ಕೈಕೊಳ್ಳುವುದು ಅನಿವಾರ್ಯವಾದೀತು. ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆ ಅದಕ್ಕಾಗಿ ಒತ್ತಾಯಿಸದೇ ಇರಲಾರದು. ಅದು ಅಸ್ತಿತ್ವಕ್ಕೆ ಬಂದಂದಿನಿಂದ ಇಂದಿನವರೆಗೆ ಎಲ್ಲಾ ದೇಶಗಳಿಗೂ ಬೃಹತ್ ಪ್ರಮಾಣದ ಸಾಲ ನೀಡುವಾಗ ನಾಣ್ಯ ಅಪಮೌಲ್ಯ ಮಾಡುವ ಶರತ್ತು ಕಡ್ಡಾಯವಾಗಿಯೇ ಇದ್ದುದನ್ನು ನಾವು ಗಮನಿಸಬೇಕು. 1966ರಲ್ಲಿ ಭಾರತ ಈಗಿನ ಸಾಲದ 1/3ರಷ್ಟು ಮಾತ್ರ ಈ ಸಂಸ್ಥೆಯಿಂದ ಸಾಲ ಪಡೆದಾಗಲೂ, ಮೂರೇ ತಿಂಗಳುಗಳಲ್ಲಿ ಶೇ. 57ರಷ್ಟು ರೂಪಾಯಿಯ ಅಪಮೌಲ್ಯ ಮಾಡಬೇಕಾಯಿತು. ಜಮೈಕಾ, ಚಿಲಿ ಮುಂತಾದ ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಈ ಸಂಸ್ಥೆಯಿಂದ ಸಾಲಪಡೆದು ಆರ್ಥಿಕ ಸಾರ್ವಭೌಮತೆ ಕಳೆದುಕೊಂಡು ದಿವಾಳಿಯಾದುದನ್ನು ಮರೆಯಬಾರದು. 1966ರ ಸಾಲದಿಂದಾಗಿ, ರೂಪಾಯಿ ಅಪಮೌಲ್ಯಗೊಂಡು, ಮೂರನೇ ಪಂಚವಾರ್ಷಿಕ ಯೋಜನೆ ಮುರಿದು ಬಿದ್ದು, ಹಣದುಬ್ಬರ ನಿರುದ್ಯೋಗಉಲ್ಬಣಗೊಂಡು ವೇತನಮಟ್ಟ, ಜೀವನಮಟ್ಟ ಕುಸಿಯಿತು. ಆರ್ಥಿಕ ದುಃಸ್ಥಿತಿಯಿಂದಾಗಿ ಜನರಲ್ಲಿ ಹಾಹಾಕಾರವೆದ್ದಿತು. ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಯಿಂದ ಸಾಲಪಡೆಯುವುದೆಂದರೆ ನಮ್ಮ ದೇಶದ ಸ್ವಾತಂತ್ರ್ಯ, ಸ್ವಾಭಿಮಾನ, ಸ್ವಾವಲಂಬನೆ, ಸಾರ್ವಭೌಮತೆಯನ್ನು ಮಾರಿಕೊಂಡಂತೆ!

ಸಾಲವಿಲ್ಲದೆ ಕೊರತೆನೀಗಿಸಲುಸಾಧ್ಯವೇ?

ವಿದೇಶಿ ವ್ಯಾಪಾರದಲ್ಲಿ ಕೊರತೆ ನೀಗಿಸಬೇಕಾದರೆ, ರಫ್ತು ಹೆಚ್ಚಾಗಬೇಕು. ಆಮದು ಕಡಿಮೆಯಾಗಬೇಕು.

ರಫ್ತು ಹೆಚ್ಚಾಗಲು ಗುತ್ತೇದಾರಿ ಕೈಗಾರಿಕೋದ್ಯಮಿಗಳಿಗೆ ಭಾರೀ ಸಾಲ ಸಹಾಯಧನ, ಸವಲತ್ತುಗಳನ್ನು ಕೊಡುತ್ತಾ ಬಂದಿದ್ದರೂ, ರಫ್ತುವ್ಯಾಪಾರ 1976–77 ರಿಂದ ಸ್ಥಗಿತಗೊಂಡಿದೆ. ಕಾರಣ, ನಮ್ಮ ರಫ್ತುವ್ಯಾಪಾರದ ಸಿಂಹಪಾಲು ಬಂಡವಾಳಶಾಹಿ ರಾಷ್ಟ್ರಗಳನ್ನು ಅವಲಂಬಿಸಿದೆ. ಈ ರಾಷ್ಟ್ರಗಳು ಹಣದುಬ್ಬರ, ನಿರುದ್ಯೋಗ ಇತ್ಯಾದಿ ತೀವ್ರ ಆರ್ಥಿಕ ದುಃಸ್ಥಿತಿಗೊಳಗಾಗಿವೆ. ಅದನ್ನು ಹೋಗಲಾಡಿಸಲು ಈ ದೇಶಗಳು ಭಾರತದಂತಹ ಬಡದೇಶಗಳ ರಫ್ತು ವ್ಯಾಪಾರಗಳಿಗೆ ತೀವ್ರ ತಡೆ ಒಡ್ಡುತ್ತಿವೆ ತಮ್ಮ ಸಾಲಸಹಾಯಗಳಿಂದಾಗಿ ಬಡರಾಷ್ಟ್ರಗಳಲ್ಲಿಯೇ ತಮ್ಮ ರಫ್ತುವ್ಯಾಪಾರವನ್ನು ವಿಸ್ತರಿಸಲು ಪ್ರಯತ್ನಿಸುತ್ತಿವೆ! ಬಂಡವಾಳಶಾಹಿ ಆರ್ಥಿಕಪದ್ಧತಿಯನ್ನನುಸರಿಸುತ್ತಿರುವ ಭಾರತವೂ ನಿರುದ್ಯೋಗ, ಹಣದುಬ್ಬರಗಳಿಂದಾಗಿ

(6ನೇ ಪುಟನೋಡಿ)

ಅಂಗೋಲದ ಮೇಲೆ ವರ್ಣದ್ವೇಷಿಗಳ ದುರಾಕ್ರಮಣ

ಅಂಗೋಲದ ಜನತಾಗಣರಾಜ್ಯದ ಮೇಲೆ ಕಳೆದ ತಿಂಗಳು ದ. ಆಫ್ರಿಕದ ವರ್ಣದ್ವೇಷಿ ಸರಕಾರ ಮತ್ತೊಂದುಬಾರಿ ದಾಳಿ ಮಾಡಿದೆ. 1975ರಲ್ಲಿ ಅಂಗೋಲದ ಮಹಾಜನತೆಯ ವಿಜಯದ ತರುವಾಯ ಸಾಮ್ರಾಜ್ಯವಾದಿಗಳಿಗೆ ಎಲ್ಲಿಲ್ಲದ ದಿಗಿಲಾಗಿದೆ. ಕೈಗೊಂಬೆ ಸರಕಾರವನ್ನು ಸ್ಥಾಪಿಸಲು ಮತ್ತು ಅಂಗೋಲದ ಜನತೆಗೆ ಸಿಕ್ಕಿರುವ ಸ್ವಾತಂತ್ರ್ಯವನ್ನು ಒಂದು ಔಪಚಾರಿಕ ಸಂಗತಿಯನ್ನಾಗಿ ಮಾಡಲು ಸಾಮ್ರಾಜ್ಯವಾದಿಗಳು ಅನೇಕ ಕುಟಿಲೋಪಾಯಗಳನ್ನು ನಡೆಸಿ ಸೋತಿದ್ದಾರೆ.

ಅಂಗೋಲದಲ್ಲಿ ಕೆಲವು ಕರಿಯ ಪ್ರತಿಕ್ರಾಂತಿಕಾರಿಗಳಿಗೆ ಪ್ರಚೋದನೆ ನೀಡುವುದು, ದ. ಆಫ್ರಿಕ ಮತ್ತು ನಮೀಬಿಯದ ನೆಲೆಗಳಿಂದ ಅಂಗೋಲದಲ್ಲಿ ವಿಛಿದ್ರಕಾರಿ ಚಟುವಟಿಕೆ ನಡೆಸುವುದು ಈಗ ಸಾಲದೇ ಹೋಗಿದೆ. ಜಗತ್ತಿನಾದ್ಯಂತ ಮುಖ್ಯವಾಗಿ ಸಮಾಜವಾದಿ ಬಣದ ಸಹಾಯದಿಂದಾಗಿ ಇಂದು ಅಂಗೋಲ ಸ್ವತಂತ್ರ ಅಭಿವೃದ್ಧಿಯ ಹಾದಿಯನ್ನು ಹಿಡಿದಿರುವುದನ್ನು ಸಹಿಸದೆ ಸಾಮ್ರಾಜ್ಯವಾದಿಗಳು ಈಗ ಅದರ ಗಡಿಯ ಮೇಲೆ ದಾಳಿ ನಡೆಸಿದ್ದಾರೆ. ಈ ದಾಳಿಯಲ್ಲಿ ದ. ಆಫ್ರಿಕೆಯ ಸೈನಿಕರೇ ಭಾಗವಹಿಸಿದ್ದರೂ ವಾಸ್ತವವಾಗಿ ಅದು ಅಮೇರಿಕಾದ ಸಾಮ್ರಾಜ್ಯವಾದಿಗಳ ಕುತಂತ್ರ ಎನ್ನುವುದರಲ್ಲಿ ಸಂದೇಹವಿಲ್ಲ. ಒಟ್ಟಿನಲ್ಲಿ ಅಂಗೋಲದಲ್ಲಿ ಆಂತರಿಕವಾಗಿ ವಿಛಿದ್ರಕಾರಿ ಚಟುವಟಿಕೆಗಳನ್ನು ನಡೆಸುವುದು, ಅದು ಸಾಲದಾದಾಗ ಅದರ ಗಡಿಯ ಮೇಲೆ ದಾಳಿ ನಡೆಸುವುದು, ಆ ಮೂಲಕ ಅಂಗೋಲದ ಅಭಿವೃದ್ಧಿಯನ್ನು ತಡೆಹಿಡಿಯುವುದು, ಅಲ್ಲಿನ ಜನಪ್ರಿಯ ಜನತಾ ಸರಕಾರವನ್ನು ಉರುಳಿಸುವುದು-ಇದು ಸಾಮ್ರಾಜ್ಯವಾದಿಗಳ ಹಾಗೂ ವರ್ಣದ್ವೇಷಿಗಳ ಕನಸು.

ಸುಳ್ಳು ಕಾರಣಗಳು

ದ. ಆಫ್ರಿಕ ಮತ್ತು ಅಮೇರಿಕಾದ ಸಾಮ್ರಾಜ್ಯವಾದಿಗಳು ಪ್ರತಿಬಾರಿಯೂ ಇಂಥ ದಾಳಿಗಳಿಗೆ ಕೊಡುವ ಕಾರಣಗಳು ನೋಡಲು ಬೇರೆಬೇರೆಯಾಗಿ ಕಾಣಬಹುದು. ಆದರೆ ಅವುಗಳ ಮೂಲ ಉದ್ದೇಶ ಒಂದೇ ಎಂಬುದನ್ನು ಮರೆಯಬಾರದು. ವರ್ಣದ್ವೇಷಿ ಸರಕಾರದ ಈ ದಾಳಿಯನ್ನು ಖಂಡಿಸುವುದರಜೊತೆಗೆ ಅಮೇರಿಕ ಮತ್ತೊಂದು ಮಾತನ್ನು ಈ ಸಾರಿ ಸೇರಿಸಿದೆ. ಅಂಗೋಲದಲ್ಲಿ ಕ್ಯೂಬಾದ ಸೈನ್ಯವಿರುವ ಹಿನ್ನೆಲೆಯಲ್ಲಿ ಈ ದಾಳಿಯನ್ನು ನೋಡಬೇಕೆಂಬುದಾಗಿ ಅದು ಕರೆ ನೀಡಿದೆ. ಅದೇ ರೀತಿ ದ. ಆಫ್ರಿಕ ಕೊಟ್ಟಿರುವ ಕಾರಣವು ಸ್ವಲ್ಪ ಭಿನ್ನವಿದೆ. ನಮೀಬಿಯದ ಗೆರಿಲ್ಲಾ ಹೋರಾಟಗಾರರಿಗೆ ಅಂಗೋಲ ಆಶ್ರಯ ನೀಡಿರುವುದರಿಂದ ಅವರನ್ನು ನಾಶಮಾಡಲು ಈ ಮಿತವಾದ ದಾಳಿಯನ್ನು ಕೈಕೊಳ್ಳಲಾಗಿದೆ ಎಂದು ಅದು ತಿಳಿಸಿದೆ.

ಇದರಲ್ಲಿ ಯಾವುದನ್ನು ಸರಿಯಾದ ಕಾರಣವೆಂದು ನಾವು ತಿಳಿಯಬೇಕು? ವಾಸ್ತವವಾಗಿ ಇವೆರಡೂ ಕಾರಣಗಳು ಒಂದೇ ಆಗಿವೆ. ಇತರರನ್ನು ದಾರಿ ತಪ್ಪಿಸಲು ಮಾತ್ರ ಈ ಕಾರಣಗಳನ್ನು ಮುಂದೆ ಮಾಡಲಾಗಿದೆ.

ನಮೀಬಿಯದ ಸ್ವಾತಂತ್ರ್ಯಹೋರಾಟ ಇತ್ತೀಚೆಗೆ ತೀರಾ ವಿಶಾಲವಾಗಿದೆ. ಝಿಂಬಾಬ್ವೆಯಲ್ಲಿ ಮುಗಾಬೆಯವರ ನಾಯಕತ್ವದಲ್ಲಿ ವಿಮೋಚನಾ ಚಳುವಳಿಗೆ ಜಯ ದೊರಕಿದ ನಂತರ ಮತ್ತೂ ಆಫ್ರಿಕದ ವರ್ಣದ್ವೇಷದ ಮತ್ತೊಂದು ನೆಲೆಯಾದ ನಮೀಬಿಯದಲ್ಲಿ ವಿಮೋಚನಾ ಸಮರದ ದಳ್ಳುರಿ ವ್ಯಾಪಕವಾಗಿದೆ.

ಈ ಸಮರಕ್ಕೆ ಸಹಜವಾಗೇ ಅಂಗೋಲದ ವಿಜಯೀ ಜನತೆ ಸರ್ವರೀತಿಯ ಸಹಾಯ ಸಲ್ಲಿಸುತ್ತಿದ್ದಾರೆ. ವರ್ಣದ್ವೇಷವು ನ್ಯಾಯಬಾಹಿರವಾದುದೆಂದು ಜಗತ್ತೇ ಘಂಟಾಘೋಷವಾಗಿ ಹೇಳುತ್ತಿರುವುದರಿಂದ ವಾಸ್ತವವಾಗಿ ಅಂಗೋಲ ಜಗತ್ತಿನ ಕ್ರಾಂತಿಗಳ ಶಕ್ತಿಗಳ ಅಭಿಪ್ರಾಯವನ್ನು ಕಾರ್ಯರೂಪಕ್ಕೆ ತರುತ್ತಿರುವರೆಂದೇ ಹೇಳಬೇಕು. ವಿಶ್ವಸಂಸ್ಥೆಯು ನಮೀಬಿಯದ ಸ್ವಾತಂತ್ರ್ಯಕ್ಕಾಗಿ ಯೋಜನೆಗಳನ್ನು ರೂಪಿಸುತ್ತಿರುವಾಗ ಅಲ್ಲಿನ ಕ್ರಾಂತಿಕಾರಿಗಳನ್ನು ನಾಶಮಾಡಲು ದ. ಆಫ್ರಿಕ ಹವಣಿಸುತ್ತಿದೆ. ನಮೀಬಿಯದಲ್ಲಿ ಜನತಾ ಸರಕಾರವಿದ್ದಿದ್ದರೆ ಆಗ ಅಂಗೋಲ ಪ್ರತಿಕ್ರಾಂತಿಕಾರಿಗಳಿಗೆ ಪ್ರಚೋದನೆ ನೀಡಿದ್ದರೆ ಈ ಪ್ರಶ್ನೆ ಉದ್ಭವವಾಗುತ್ತಿತ್ತು. ನಮೀಬಿಯದ ಸ್ವಾತಂತ್ರ್ಯ ಹೋರಾಟಗಾರರಿಗೆ ಆಶ್ರಯ ಕೊಡಕೂಡದು. ದ. ಆಫ್ರಿಕ ಬಯಸುತ್ತಿದ್ದರೆ ಅವನ್ನು ಎದುರಿಸದೇ ಅಂಗೋಲಕ್ಕೆ ಗತಿ ಇಲ್ಲ. ನಮೀಬಿಯದ ಬಿಳಿಯರ ಅಲ್ಪಸಂಖ್ಯಾತ ಸರಕಾರವನ್ನು ರಕ್ಷಿಸುತ್ತಿರುವವರು ದ. ಆಫ್ರಿಕದ ಬಿಳಿಯರೇ. ನಮೀಬಿಯವನ್ನು ದ. ಆಫ್ರಿಕೆಯು ಇಂದು ಆಕ್ರಮಿಸಿದೆ. ಆ ಆಕ್ರಮಣವನ್ನು ತೆರವುಮಾಡಿಸುವುದು, ಅಲ್ಲಿನ ಜನತೆಗೆ ಅಧಿಕಾರ ಕೊಡುವಂತೆ ಮಾಡುವುದು ಎಲ್ಲ ಪುರೋಗಾಮಿಗಳ ಕರ್ತವ್ಯ. ಅಂಗೋಲದ ಪ್ರತಿಕ್ರಾಂತಿಕಾರಿಗಳಿಗೆ ನಮೀಬಿಯದಿಂದಲೇ ಇಂದು ದ. ಆಫ್ರಿಕ ಸಹಾಯ ಸಲ್ಲಿಸುತ್ತಿದೆ, ಅಂಗೋಲದಲ್ಲಿ ಬುಡಮೇಲು ಕೃತ್ಯವನ್ನು ನಡೆಸುತ್ತಿದೆ. ವಾಸ್ತವವಾಗಿ ಅಂಗೋಲವೇನಾದರೂ ಪ್ರಬಲವಾಗಿದ್ದರೆ ಈ ಬುಡಮೇಲು ಕೃತ್ಯಗಳನ್ನು ಹತ್ತಿಕ್ಕಲು ಅವರೇ ಕ್ರಮಕೈಗೊಳ್ಳಲು ಮುಂದಾಗಿದ್ದರೂ ಅದು ಸರಿಯಾದ ಕ್ರಮವೇ ಆಗುತ್ತಿತ್ತು.

ಒಟ್ಟಿನಲ್ಲಿ ಈ ದಾಳಿಯ ಹಿಂದೆ ಒಂದು ಉದ್ದೇಶ ಸ್ಪಷ್ಟವಿದೆ: ನಮೀಬಿಯದ ಸ್ವಾತಂತ್ರ್ಯದ ಮೇಲೆ ವಿಶ್ವಸಂಸ್ಥೆ ನಡೆಸುವ ಒಂದು ವಿಶೇಷ ಅಧಿವೇಶನವನ್ನು ದಾರಿ ತಪ್ಪಿಸುವುದು, ಪ್ರಶ್ನೆಯನ್ನು ಅಂಗೋಲ–ದ. ಆಫ್ರಿಕದ ಕದನದ ಪ್ರಶ್ನೆಯನ್ನಾಗಿ ಮಾರ್ಪಡಿಸುವುದು. ಇದೇ ಉದ್ದೇಶ ಸಾಧನೆಗೆ ಅಮೇರಿಕೆಯು ಈ ಯುದ್ಧಕ್ಕೆ ತನ್ನ ಸಮ್ಮತಿಯನ್ನು ಸೂಚಿಸಿದೆ. ಆದರೆ ಕೊಡುವ ಕಾರಣ ಮಾತ್ರ ಬೇರೆ. ಆಫ್ರಿಕ ಖಂಡದಲ್ಲಿ ಸ್ವಾತಂತ್ರ್ಯ ಹೋರಾಟಗಳನ್ನು ಹತ್ತಿಕ್ಕಲು, ಸದಾಕಾಲ ಯುದ್ಧ ಪ್ರಚೋದನೆಯನ್ನು ನಡೆಸಲು ಸಾಮ್ರಾಜ್ಯವಾದಿಗಳಿಗೆ ದ. ಆಫ್ರಿಕ ಒಂದು ನೆಲೆ. ನಡೆದ ದಾಳಿಯ ಮೂಲಕ ಅಂಗೋಲದ ಸ್ವಾತಂತ್ರ್ಯಕ್ಕೇ ಅಪಾಯ ತರುವುದೂ ಒಂದು ಉದ್ದೇಶ. ಆದ್ದರಿಂದ ಒಂದೇ ಏಟು ಎರಡು ಗುರಿಗಳನ್ನು ಕೆಡವುದು ವರ್ಣದ್ವೇಷಿಗಳ ಬಯಕೆ.

ಸಾಮ್ರಾಜ್ಯವಾದಿಗಳ ದಿಮುಖ ನೀತಿ

ದ. ಆಫ್ರಿಕದ ವಿಷಯದಲ್ಲಿ ಎಲ್ಲ ಸಾಮ್ರಾಜ್ಯವಾದಿಗಳೂ ದ್ವಿಮುಖ ನೀತಿಯನ್ನು ಹೊಂದಿವೆ ಎಂದರೆ ತಪ್ಪಾಗಲಾರದು. ಒಂದು ಕಡೆ ಬಹಿರಂಗವಾಗಿ ವರ್ಣದ್ವೇಷವನ್ನು ದೂಷಿಸುವುದು ಮತ್ತೊಂದೆಡೆ ವಾಸ್ತವಿಕವಾಗಿ ಅದನ್ನು ಬಲಪಡಿಸುವುದು, ವರ್ಣದ್ವೇಷದ ವಿರೋಧಿಗಳು ಪ್ರತಿಭಟಿಸಿದಾಗ ಕಾಲಿಗೆ ಬೀಳುವುದು. ವರ್ಣದ್ವೇಷಿಗಳಿಗೆ

ರುದ್ರಪ್ಪ ಕಾಯಿ

ಸಹಾಯ ಸಲ್ಲಿಸುವುದು ಅವರ ನೀತಿ. ಅಮೇರಿಕೆಯು ವರ್ಣದ್ವೇಷವನ್ನು ಖಂಡಿಸುವುದಾದರೆ ದ. ಆಫ್ರಿಕದಿಂದ ತನ್ನ ಸೈನಿಕ ನೆಲೆಯನ್ನೇಕೆ ಹಿಂತೆಗೆದುಕೊಂಡಿಲ್ಲ? ಹಿಂತೆಗೆದುಕೊಳ್ಳುವಂತೆ ನ್ಯಾಟೋ ಕೂಟದ ಇತರ ಯುದ್ಧಖೋರರೇಕೆ ಒತ್ತಾಯ ತರುತ್ತಿಲ್ಲ? ವಿಶ್ವಸಂಸ್ಥೆಯ ನಿಯಮದಂತೆ ರಾಜಕೀಯ ಆರ್ಥಿಕ ಸಂಬಂಧಗಳನ್ನೇಕೆ ಈ ನ್ಯಾಟೋ ರಾಷ್ಟ್ರಗಳು ಕಡಿದುಕೊಂಡಿಲ್ಲ? ಸಾಮ್ರಾಜ್ಯವಾದಿಗಳು ಬೆಂಬಲಿಸುವುದನ್ನು ನಿಲ್ಲಿಸಿದರೆ ದ. ಆಫ್ರಿಕದಲ್ಲಿ ವರ್ಣದ್ವೇಷ ಸರಕಾರ ಒಂದು ದಿನವೂ ನಿಲ್ಲಲು ಸಾಧ್ಯವಿಲ್ಲ. ನಮೀಬಿಯದ ಸ್ವಾತಂತ್ರ್ಯವನ್ನು ಅಲ್ಲಿನ ವಿಮೋಚನಾ ಹೋರಾಟದ ನಾಯಕಸಂಸ್ಥೆ ಸ್ವಾಪೋ (SWAAPO)ಗೆ ಒಪ್ಪಿಸಲು ಇಂದು ಅಡ್ಡ ಬರುತ್ತಿರುವವರು ಸಾಮ್ರಾಜ್ಯವಾದಿಗಳೇ ಎಂಬುದು ಈ ದಾಳಿಯ ಮೂಲಕ ಮತ್ತೊಮ್ಮೆ ಬಯಲಾಗಿದೆ.

ಖಡಾಖಂಡಿತ ವಿರೋಧ ತೋರಿಸಲು ಮುಖವಿಲ್ಲದ ಸಾಮ್ರಾಜ್ಯವಾದಿಗಳು ಹೀಗೆ ದ್ವಿಮುಖ ನೀತಿಯನ್ನು ಅನುಸರಿಸುತ್ತಾರೆ. ಆಫ್ರಿಕ ಖಂಡದ ವಿಮೋಚನೆಯನ್ನು ತಡೆಗಟ್ಟಲು ದ. ಆಫ್ರಿಕೆಯನ್ನು ತಮ್ಮ ನೆಲೆಯನ್ನಾಗಿ ಸಾಮ್ರಾಜ್ಯವಾದಿಗಳು ಬಳಸುತ್ತಿರುವರು. ನಮೀಬಿಯದಲ್ಲಿರುವ ಸಾಮ್ರಾಜ್ಯವಾದಿಗಳ ಕಂಪನಿಗಳ ಹಿತಾಸಕ್ತಿಗಳನ್ನು ರಕ್ಷಿಸುವ, ಅಲ್ಲಿನ ಸ್ವಾತಂತ್ರ್ಯ ಹೋರಾಟವನ್ನು ಹತ್ತಿಕ್ಕುವ ಸಾಮ್ರಾಜ್ಯವಾದಿಗಳ ಸಾಕು ನಾಯಿ ದ. ಆಫ್ರಿಕದ ವರ್ಣದ್ವೇಷ ಸರಕಾರ. ಒಂದಲ್ಲ ಒಂದು ರೀತಿಯಲ್ಲಿ ವಸಾಹತುವಾದ ಹಿಡಿತವನ್ನು ಆಫ್ರಿಕದಲ್ಲಿ ಬಲಗೊಳಿಸುವುದು ಸಾಮ್ರಾಜ್ಯವಾದಿಗಳ ಬಯಕೆ. ವಿಮೋಚನೆಯತ್ತ ನಡೆಯುತ್ತಿರುವ ಇತಿಹಾಸದ ಗತಿಯ ವಿರುದ್ಧ ಸಾಮ್ರಾಜ್ಯವಾದಿಗಳು ಈಜಬೇಕೆನ್ನುತ್ತಿರುವರು. ನಮೀಬಿಯದ ಸ್ವಾತಂತ್ರ್ಯದ ಪ್ರಶ್ನೆ ಬಂದಾಗಲೆಲ್ಲ ಒಂದಲ್ಲ ಒಂದು ರೀತಿ ಅಡೆತಡೆಯೊಡ್ಡುವುದು ಸಾಮ್ರಾಜ್ಯವಾದಿಗಳ ಪರಿಪಾಠ. ಝಿಂಬಾಬ್ವೆಯಲ್ಲಿ ಜನಮತಗಣನೆ ನಡೆಯುತ್ತಿರುವ ಸಮಯದಲ್ಲೂ ಕೂಡ ಕೊನೆಯ ಗಳಿಗೆಯಲ್ಲಿ ಏನು ನಡೆಯುತ್ತದೋ ಎನ್ನುವ ಆತಂಕ ಎಲ್ಲರಿಗೂ ಇತ್ತು. ಆದರೆ ಜಗತ್ತಿನ ಅಭಿಪ್ರಾಯದ ಪ್ರಬಲತೆಗೆ, ಮುಗಾಬೆ ನೇತೃತ್ವದ ಜನತಾರಂಗದ ಬಲಕ್ಕೆ ತಲೆಬಾಗಿ ಯಾವುದೇ ರೀತಿಯ ಹಸ್ತಕ್ಷೇಪ ಅಲ್ಲಿ ಅಸಾಧ್ಯವಾಗಿ ಹೋಯಿತು. ಹಿಂದೊಂದು ಬಾರಿ ಜನಮತಗಣನೆ ನಡೆಸಿ ನಮೀಬಿಯದ ಅಧಿಕಾರವನ್ನು ಅಲ್ಲಿನ ಕರಿಯ ಜನರಿಗೆ ಕೊಡಬೇಕೆಂದು ವಿಶ್ವಸಂಸ್ಥೆ ಸಾರಿದ್ದ ಸಮಯದಲ್ಲೇ ದ. ಆಫ್ರಿಕ ಅದನ್ನು ಮುರಿಯಲು ತಾನೇ ಜನಮತಗಣನೆ ನಡೆಸುವ ನೆಪಮಾಡಿ ನಮೀಬಿಯವನ್ನು ಬಂಟುಸ್ಥಾನಗಳ ಹೆಸರಿನಲ್ಲಿ ಒಡೆದು ಈ ಬಂಟುಸ್ಥಾನಗಳಿಗೆ ಸ್ವಾತಂತ್ರ್ಯ ನೀಡುವುದಾಗಿ, ಅಲ್ಲಿಯವರೆಗೂ ನಮೀಬಿಯವನ್ನು ತಾನೇ ಆಳುವುದಾಗಿ ದ.ಆಫ್ರಿಕ 31-12-78ರಂದು ಘೋಷಿಸಿತ್ತು.

ಆದರೆ ಇಂದು ಪರಿಸ್ಥಿತಿ ಸಂಪೂರ್ಣ ಬದಲಾಯಿಸಿದೆ. ನಮೀಬಿಯದ ಹೊರಗೆ ಆಫ್ರಿಕಾಖಂಡವೂ ಸೇರಿದಂತೆ ಜಗತ್ತಿನ ನಾನಾ ಭಾಗಗಳಲ್ಲಿ ವರ್ಣದ್ವೇಷದ ವಿರೋಧಿಗಳು ಈಗ ಹೆಚ್ಚು ಪ್ರಬಲರಾಗಿರುವುದೇ ಅಲ್ಲದೇ ನಮೀಬಿಯದ ವಿಮೋಚನಾ ಪಡೆಗಳು ಸಾಕಷ್ಟು ವಿಸ್ತಾರವಾಗಿ ಬೆಳೆದು ಆಂತರಿಕ ಯುದ್ಧಕ್ಕೆ ಯಶಸ್ವಿಯಾಗಿ ನಾಯಕತ್ವ ನೀಡುತ್ತಿವೆ. ಆದ್ದರಿಂದ ಕುತಂತ್ರಗಳು ಕೆಲಸಮಾಡುವ ಸ್ಥಿತಿಯಲ್ಲಿಲ್ಲವೆಂದೇ ಹೇಳಬೇಕಾಗಿದೆ. ಆದಕ್ಕೆಂದೇ ನೇರ ಸೈನಿಕ ಕಾರ್ಯಾಚರಣೆ ನಡೆಸಲು ದ. ಆಫ್ರಿಕ ಮುಂದಾಗಿದೆ. ಸಾಮ್ರಾಜ್ಯವಾದಿ ದ್ವಿಮುಖ ನೀತಿಗೆ ಇಂದು ಯಾರೂ ಬಲಿಬೀಳುವುದಿಲ್ಲ.

ಸಾಮ್ರಾಜ್ಯವಾದಿಗಳಲ್ಲಿ ಒಡಕು

ಇದೇ ಸಂದರ್ಭದಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವಿದೆ. ಸಾಮ್ರಾಜ್ಯವಾದಿಗಳಲ್ಲಿ ಬ್ರಿಟನ್ ಈ ದಾಳಿಯನ್ನು ವಿರೋಧಿಸಲೇ ಬೇಕಾದಂಥ ಪರಿಸ್ಥಿತಿ ಈಗ ಬಂದಿದೆ. ಸುಸ್ಪಷ್ಟ ಮಾತುಗಳಲ್ಲಿ ಅಂಗೋಲದಿಂದ ಕಾಲ್ತೆಗೆಯುವಂತೆ ದ. ಆಫ್ರಿಕಕ್ಕೆ ಬ್ರಿಟನ್ ಕರೆನೀಡಿದೆ. ಫ್ರಾನ್ಸ್‌ಕೂಡ ಈ ಆಕ್ರಮಣವನ್ನು ಕಟುವಾಗಿ ಟೀಕಿಸಿದೆ. ಮಿಟರಾಂಡರ ನೇತೃತ್ವದಲ್ಲಿ ಹೊಸ ಸರಕಾರ ಅಸ್ತಿತ್ವಕ್ಕೆ ಬಂದಿರುವುದರಿಂದ ಫ್ರಾನ್ಸ್‌ನ ವಿದೇಶ ನೀತಿಯಲ್ಲಿ ಗಣನೀಯ ಬದಲಾವಣೆ ಕಂಡುಬರುತ್ತಿದೆ. ಜನಾಭಿಪ್ರಾಯಕ್ಕೆ ಹೆದರಿ ಇಂದು ಸಾಮ್ರಾಜ್ಯವಾದಿಗಳೂ ಆಕ್ರಮಣದ ವಿಷಯದಲ್ಲಿ ವಿರುದ್ಧ ನಿಲುವುಗಳನ್ನು ತಳೆಯುವಂತಾಗಿರುವುದು ಒಂದು ವಿಜಯವೇ ಹೌದು. ಆದರೆ ಅಮೇರಿಕ ಮಾತ್ರ ತನ್ನ ಹೇಯ ಹಠವಾದಿ ನಿಲುಮೆಯನ್ನು ಮುಂದುವರಿಸುತ್ತಿದೆ. ಸಾಮ್ರಾಜ್ಯವಾದಿ ಬಣದೊಳಗಿನ ಈ ವೈರುಧ್ಯವನ್ನು ಬಳಸಿಕೊಂಡು ನಮೀಬಿಯದ ಸ್ವಾತಂತ್ರ್ಯ ಚಳುವಳಿಯು ಮುನ್ನಡೆಯಲು ಉತ್ತಮ ಅವಕಾಶವಿದೆ.

ದಾಳಿ ಹೀಗೆ ಮುಂದುವರೆದರೆ ಕ್ಯೂಬದ ಸಮಾಜವಾದಿ ಸೈನ್ಯದ ನೆರವು ಕೋರುವುದಾಗಿ ಅಂಗೋಲದ ಸರಕಾರವು ಘಂಟಾಘೋಷವಾಗಿ ಹೇಳಿದೆ. ಆಫ್ರಿಕಾ ರಾಷ್ಟ್ರಗಳ ಸಂಘಟನೆಯಾದ ಆಫ್ರಿಕನ್ ಯೂನಿಟಿ ಆರ್ಗನೈಜೇಶನ್ ಕೂಡ ಈ ದಾಳಿಯನ್ನು ಖಂಡಿಸಿದೆಯಲ್ಲದೇ ದ. ಆಫ್ರಿಕದ ಮೇಲೆ ದಿಗ್ಬಂಧನವನ್ನು ಕಠಿಣವಾಗಿ ಹೇರಬೇಕೆಂಬ ಬೇಡಿಕೆಯನ್ನು ಮುಂದಿಟ್ಟಿದೆ.

ಹೀಗೆ ಒಂದೆಡೆ ನಮೀಬಿಯದ ಪ್ರಶ್ನೆಯನ್ನು ಮರೆಮಾಚುವ ಯತ್ನಗಳು ನಡೆಯುತ್ತಿರುವಾಗ, ನಮೀಬಿಯವನ್ನು ತೆರವುಮಾಡಿ ಅಲ್ಲಿ ಮುಕ್ತ ಚುನಾವಣೆಗಳ ಮೂಲಕ ಜನತಾಸರಕಾರ ಸ್ಥಾಪನೆಯಾಗಬೇಕೆಂಬ ಬೇಡಿಕೆ ಪ್ರಬಲವಾಗುತ್ತಿದೆ. ಇತಿಹಾಸ ಚಲಿಸುವುದೇ ಇಂಥ ಇಕ್ಕಟ್ಟುಗಳ ಮೂಲಕ. ಈ ಇಕ್ಕಟ್ಟಿನಲ್ಲಿ ನಮೀಬಿಯಕ್ಕೆ ಸ್ವಾತಂತ್ರ್ಯಕೊಡುವುದೇ ನಿಜವಾದ ಪರಿಹಾರ. ಸಾಮ್ರಾಜ್ಯವಾದದ ಮತ್ತು ವರ್ಣದ್ವೇಷ ದ. ಆಫ್ರಿಕ ಸರಕಾರದ ವಿರುದ್ಧ ಮತ್ತೊಂದು ಐತಿಹಾಸಿಕ ವಿಜಯವು ಇಷ್ಟರಲ್ಲೇ ನಮೀಬಿಯದಲ್ಲಿ ದೊರಕಲಿದೆ ಎಂಬುದರಲ್ಲಿ ಸಂದೇಹವೇ ಇಲ್ಲ. ಆದರೆ ಈ ಸ್ವಾತಂತ್ರ್ಯ ಝಿಂಬಾಬ್ವೆನಲ್ಲಿನ ಹಾದಿ ತುಳಿಯುವುದೋ ಅಥವಾ ಕಾರ್ಯಾಚರಣೆಯ ಮೂಲಕವೇ ಅಂತಿಮ ಜಯಪಡೆಯುವುದೋ ಎಂಬುದು ಕಾದುನೋಡಬೇಕಾದ ಸಂಗತಿ.

ಸಾಮ್ರಾಜ್ಯವಾದಿಗಳು ಹೀಗೆ ಒಡೆದು ನಿಲ್ಲುವುದಾದರೆ, ಅವರ ಹಸ್ತಕ್ಷೇಪಕ್ಕೆ ಕಡಿವಾಣಹಾಕಲು ಜಾಗತಿಕ ಕ್ರಾಂತಿಕಾರಿ ಶಕ್ತಿಗಳಿಗೆ ಸಾಧ್ಯವಾಗುವುದಾದರೆ ಝಿಂಬಾಬ್ವೆನ ಹಾದಿಯನ್ನೇ ನಮೀಬಿಯ ತುಳಿದೀತು!

○

ಆರ್ಥಿಕ ಸಮೀಕ್ಷೆ:

(4ನೇ ಪುಟದಿಂದ)

ಆಂತರಿಕ ಮಾರುಕಟ್ಟೆ ಕಳೆದುಕೊಂಡು ವಿದೇಶಿ ಮಾರುಕಟ್ಟೆಗೆ ಶರಣು ಹೋಗ ಬೇಕಾಗಿದೆ. ಆದರೆ, ರಫ್ತುವ್ಯಾಪಾರದ ಪೈಪೋಟಿಯಲ್ಲಿ ಭಾರತ ಶ್ರೀಮಂತ ಬಂಡವಾಳಶಾಹಿರಾಷ್ಟ್ರಗಳಿಗೆ ಸರಿತೂಗಲಾರದು. ಆದುದರಿಂದ, ಸದ್ಯದ ಪರಿಸ್ಥಿತಿಯಲ್ಲಿ ನಮ್ಮ ರಫ್ತುವ್ಯಾಪಾರ ಗಣನೀಯವಾಗಿ ಹೆಚ್ಚಲಾರದು.

ನಮ್ಮ ದೇಶದ ಸದ್ಯದ ವಾರ್ಷಿಕ ರೂ 12000 ಕೋಟಿ ಮೌಲ್ಯದ ಆಮದಿನಲ್ಲಿ ಅರ್ಧಾಂಶದಷ್ಟು ಪೆಟ್ರೋಲಿಯಂ ಆಗಿರುವುದು. ವಿದೇಶಿವ್ಯಾಪಾರದ ಕೊರತೆಗೆ ಏರುತ್ತಿರುವ ಪೆಟ್ರೋಲಿಯಂ ದರವು ಮುಖ್ಯಕಾರಣ ಎಂದು ವಾದವಿದೆ. ಆದರೆ, ಸರಕಾರ ಪೆಟ್ರೋಲಿಯಂ ಬಳಕೆಯಲ್ಲಿ ಮಿತವ್ಯಯ ಸಾಧಿಸಲು ವಿಫಲವಾಗಿದೆ; ಈ ಅವಶ್ಯ ವಸ್ತುವನ್ನು ನ್ಯಾಯಬೆಲೆಗೆ ಪಡಿತರ ಪದ್ಧತಿಯಲ್ಲಿ ಹಂಚುವ ಹೊಣೆಗಾರಿಕೆಯನ್ನೂ ಸರಕಾರ ವಹಿಸಿಕೊಳ್ಳುವುದಿಲ್ಲ. ಪೆಟ್ರೋಲಿಯಂ ಬಳಕೆ ಕಡಿಮೆ ಆಗಲಿಎಂದು ಅದರ ಬೆಲೆ ಏರಿಸುತ್ತಲೇ ಇದೆ. ಆದರೆ, ಅನಗತ್ಯವಿಷಯಗಳಿಗೆ ಪೆಟ್ರೋಲಿಯಂ ಬಳಕೆಯನ್ನು ಶೇ 20 ರಷ್ಟು ಕಡಿಮೆ ಮಾಡಿದರೂ ರೂ. 1000 ಕೋಟಿ ಆಮದು ಮೌಲ್ಯ ಕಡಿಮೆಗೊಳಿಸಬಹುದಾಗಿದೆ. ಜೊತೆಗೇ ವಿದ್ಯುತ್, ಕಲ್ಲಿದ್ದಲು, ಇತ್ಯಾದಿ ಬದಲೀ ಇಂಧನಗಳನ್ನು ಬಳಸಿ ಪೆಟ್ರೋಲಿಯಂ ಬಳಕೆಯಲ್ಲಿ ಉಳಿತಾಯಮಾಡಬಹುದಾಗಿದೆ. ಈ ದಿಸೆಯಲ್ಲಿಯೂ ಸರಕಾರ ವಿಫಲವಾಗಿದೆ.

ದೇಶದ ಶ್ರೀಮಂತ ವರ್ಗಕ್ಕೆ ಬೇಕಾದ ಸುಖಭೋಗ ವಸ್ತುಗಳ ಆಮದನ್ನು ನಿಯಂತ್ರಿಸಿದರೆ, ರೂ 1000 ಕೋಟಿಯ ಆಮದು ಮೌಲ್ಯ ಕಡಿಮೆ ಮಾಡಬಹುದಾಗಿದೆ. ಆದರೆ, ವಿಶ್ವ ಬ್ಯಾಂಕ್ ಮತ್ತು ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಯ ಸಾಲಕ್ಕೊಳಗಾದ ಭಾರತಸರಕಾರ ಅವುಗಳ ಒತ್ತಾಯಕ್ಕೆ ಮಣಿದು ಆಮದುನೀತಿಯನ್ನು ಬಿಗಿಗೊಳಿಸುವ ಬದಲು ಸಡಿಲಗೊಳಿಸುತ್ತಿದೆ.

ದೇಶದಲ್ಲಿ ವಿಪುಲವಾಗಿ ಸಿಗಬಹುದಾದ ಗೋಧಿ, ಸಕ್ಕರೆ, ಖಾದ್ಯತೈಲ ಆಮದನ್ನು ನಿಲ್ಲಿಸಿದರೆ, ರೂ 1000 ಕೋಟಿ ಆಮದು ಮೌಲ್ಯದಲ್ಲಿ ಕಡಿಮೆ ಮಾಡಬಹುದು. ಆದರೆ ದೊಡ್ಡ ಭೂಮಾಲಕರೂ, ಶ್ರೀಮಂತ ರೈತರೂ ತಮ್ಮ ದಾಸ್ತಾನುಗಳನ್ನು ಮಾರುಕಟ್ಟೆಗೆ ಬಿಡುಗಡೆಮಾಡದೆ ಕಳ್ಳಸಾಗಾಣಿಕೆ, ಕಾಳಸಂತೆ, ಅಕ್ರಮಸಂಗ್ರಹಣೆಗಳಿಂದ ಅಪಾರ ಲಾಭ ಗಿಟ್ಟಿಸುತ್ತಿದ್ದಾರೆ. ಅವರಲ್ಲಿರುವ ದಾಸ್ತಾನುಗಳನ್ನು ಸರಕಾರ ಕಡ್ಡಾಯವಾಗಿ ಖರೀದಿಸಿ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಸುಲಭ ಬೆಲೆಗೆ ದೇಶಾದ್ಯಂತ ಹಂಚಲು ತಯಾರಿಲ್ಲ! ಬದಲು, ಕೊರತೆನೀಗಿಸಲು ಆಮದು ಮಾಡುವುದಲ್ಲದೆ.

ನಮ್ಮ ಕೈಗಾರಿಕೆಗಳು ವಿದೇಶಿ ತಂತ್ರಜ್ಞಾನ ಹಾಗೂ ಯಂತ್ರೋಪಕರಣಗಳನ್ನು ಅವಲಂಬಿಸಿವೆ. ಅವುಗಳಿಗೆ ಸ್ವದೇಶಿ ಬದಲಿ ತಂತ್ರಜ್ಞಾನ, ಯಂತ್ರೋಪಕರಣಗಳನ್ನು ಬಳಸುವುದರಿಂದ ಆಮದು ಗಣನೀಯವಾಗಿ ಕಡಿಮೆಮಾಡಬಹುದು. ಇಂತಹ ಕೆಲವೇ ವಿಧಾನಗಳಿಂದ ಸಾಲಕ್ಕೆ ಶರಣಾಗದೇ ಸಮಸ್ಯೆ ಬಗೆಹರಿಸಬಹುದು.

ಆಂತರಿಕ ಮಾರುಕಟ್ಟೆ ಬಲಪಡಿಸಬೇಕು

ವಿದೇಶಿ ಮಾರುಕಟ್ಟೆಯು ಸ್ಥಗಿತಗೊಂಡಿರುವಾಗ ನಮ್ಮ ಕೈಗಾರಿಕಾ ಹಾಗೂ ಕೃಷಿ ಉತ್ಪನ್ನಗಳಿಗೆ 68 ಕೋಟಿ ಜನಸಂಖ್ಯೆ ಇರುವ ಆಂತರಿಕ ಮಾರುಕಟ್ಟೆಯನ್ನೇ ಅವಲಂಬಿಸುವುದು ಸ್ವಾವಲಂಬನೆಯ ಮಾರ್ಗ. ಆಂತರಿಕ ಮಾರುಕಟ್ಟೆ ವೃದ್ಧಿಸಲು, ಗ್ರಾಮೀಣ ಹಾಗೂ ನಗರಗಳಲ್ಲಿನ ಜನರ ಆದಾಯ-ಗ್ರಾಹಕಶಕ್ತಿ ಹೆಚ್ಚಬೇಕು. ಗ್ರಾಮೀಣ ಪ್ರದೇಶಗಳಲ್ಲಿ ಕ್ರಾಂತಿಕಾರಕ ಭೂಸುಧಾರಣೆ-ಹೆಚ್ಚುವರಿ ಭೂಮಿಯನ್ನು ಭೂಹೀನ ಕೃಷಿ ಕಾರ್ಮಿಕರಿಗೂ ಬಡರೈತರಿಗೂ ಮರುವಿತರಣೆ ಮಾಡುವುದು, ಅವರ ವ್ಯವಸಾಯಕ್ಕೆ ಸಾಲ ಸಹಾಯಗಳನ್ನು ಒದಗಿಸುವುದು, ಅವರ ಫಸಲಿಗೆ ಯೋಗ್ಯಬೆಲೆ ನೀಡುವುದು, ಕೃಷಿ ಕಾರ್ಮಿಕರಿಗೆ ಕನಿಷ್ಠ ವೇತನ ನೀಡುವುದು, ಕೈಗಾರಿಕಾ ಕಾರ್ಮಿಕರಿಗೆ, ನೌಕರರಿಗೆ ವೇತನ ಹೆಚ್ಚಿಸುವುದು, ಬೆಲೆಏರಿಕೆಗನುಗುಣವಾಗಿ ತುಟ್ಟಿಭತ್ತೆ ನೀಡುವುದು, ಅವಶ್ಯ ಸಾಮಗ್ರಿಗಳನ್ನು ಸಾರ್ವಜನಿಕ ವಿತರಣಾವ್ಯವಸ್ಥೆಯಿಂದ ದೇಶಾದ್ಯಂತ ಜನರಿಗೆ ಹಂಚುವುದು, ಜನರ ಮೇಲಿನ ಕರಭಾರ ಕಡಿಮೆಗೊಳಿಸುವುದು, ಕಪ್ಪುಹಣವನ್ನು ಮುಟ್ಟುಗೋಲು ಹಾಕುವುದು, ಸಣ್ಣ ಹಾಗೂ ಮಧ್ಯಮ ಕೈಗಾರಿಕೆಗಳನ್ನು ಪ್ರೋತ್ಸಾಹಿಸುವುದು, ಗುತ್ತೇದಾರಿ ದೇಶವಿದೇಶಗಳ ಕೈಗಾರಿಕೋದ್ಯಮಗಳನ್ನು ರಾಷ್ಟ್ರೀಕರಿಸುವುದು. ಸರಕಾರದ ಆಡಳಿತ, ರಕ್ಷಣಾ ವೆಚ್ಚಗಳನ್ನು ಕಡಿತಗೊಳಿಸಿ ಆರ್ಥಿಕ ಅಭಿವೃದ್ಧಿ ಕಾರ್ಯಗಳಲ್ಲಿ, ಕಲ್ಯಾಣಕಾರ್ಯಗಳಲ್ಲಿ ಹೆಚ್ಚುಚ್ಚು ಹಣತೊಡಗಿಸುವುದು ಇತ್ಯಾದಿ ಮೂಲಭೂತ ಕ್ರಮಗಳಿಂದ ಸದ್ಯದ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯ ದುಸ್ಥಿತಿಗಳನ್ನು ಹೋಗಲಾಡಿಸಬಹುದಾಗಿದೆ.

ಆದರೆ, ಇಂದಿರಾ ಸರಕಾರ ಜಾಗತಿಕ ಹಣಕಾಸು ಸಂಸ್ಥೆಗಳ ಕಠಿಣ ಶರತ್ತುಗಳಿಗೆ ಶರಣುಹೊಡೆದು ಜನವಿರೋಧಿ ಕಾರ್ಮಿಕವಿರೋಧಿ ಕ್ರಮಗಳನ್ನೇ ಕೈಗೊಳ್ಳುತ್ತಿದ್ದುದರಿಂದ ಮುಂದಿನ ದಿನಗಳಲ್ಲಿ ಗಂಭೀರವಾದ ಆರ್ಥಿಕ ದುಸ್ಥಿತಿ ಉಂಟಾಗಲಿದೆ.

●

ಪೋಲೀಸರ ಹಲ್ಲೆಯ ವಿರುದ್ಧ ಪ್ರತಿಭಟನೆ

ಕಳೆದ ಆಗಸ್ಟ್ 15ರಂದು ಲಾರಿ ಚಾಲಕನೊಬ್ಬನನ್ನು ಶಿವಮೊಗ್ಗದ ಪೋಲೀಸರು ಅಮಾನುಷವಾಗಿ ಥಳಿಸಿದ್ದರು.

ಪೋಲೀಸರ ಹಲ್ಲೆಯನ್ನು ಪ್ರತಿಭಟಿಸಿ 4-9-81ರಂದು ಶಿವಮೊಗ್ಗದಲ್ಲಿ ಶಿವಮೊಗ್ಗ ಜಿಲ್ಲಾ ಮೋಟಾರ್ ವಾಹನ ಕಾರ್ಮಿಕರ ಸಂಘವು ಪ್ರತಿಭಟನಾ ಮೆರವಣಿಗೆಯನ್ನು ಏರ್ಪಡಿಸಿತ್ತು. ಮೆರವಣಿಗೆಯಲ್ಲಿ ಚಾಲಕರೊಟ್ಟಿಗೇ ನಗರದ ಅಕ್ಕಿಗಿರಣಿ ಕೆಲಸಗಾರರ ಮತ್ತು ಹಮಾಲಿಗಳ ಸಂಘದ ಸದಸ್ಯರು ಮತ್ತು ಥರ್ಮಿಟ್ ಅಲೋಯ್ಸ ಕಾರ್ಮಿಕರೂ ಪಾಲ್ಗೊಂಡಿದ್ದರು.

ಸಂಜೆ ನಡೆದ ಪ್ರತಿಭಟನಾ ಸಭೆಯನ್ನುದ್ದೇಶಿಸಿ ಕಾರ್ಮಿಕ ಮುಖಂಡ ಶ್ರೀ ಆರ್. ಸೂರಪ್ಪ, ಅಕ್ಕಿಗಿರಣಿ ಕೆಲಸಗಾರರ ಮತ್ತು ಹಮಾಲಿಗಳ ಸಂಘದ ಅಧ್ಯಕ್ಷ ಕಾಂ. ಬಿ. ತಿರುಕಪ್ಪ, ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಕಾಂ. ಕೆ. ಚಂದೂಕಟ್ಟೆ ಮತ್ತು ಎಸ್. ಬಿ. ಶಿವಶಂಕರ್, ಕಾರ್ಮಿಕಸಂಘಗಳ ಸಮನ್ವಯ ಸಮಿತಿ, ವಿಮಾನೌಕರರ ಸಂಘದ ಕಾರ್ಯದರ್ಶಿ ಕಾಂ. ಕೆ. ಲಕ್ಷ್ಮೀನಾರಾಯಣರಾವ್, ಜನತಾ ಪಕ್ಷದ ಮುಖಂಡ ಶ್ರೀ ಶಂಕರ ನಾರಾಯಣ, ಥರ್ಮಿಟ್ ಅಲೋಯ್ಸ ಕೆಲಸಗಾರರ ಪ್ರತಿನಿಧಿ ಕಾಂ. ಬಿ. ಸಿ. ರುದ್ರಪ್ಪ ಮುಂತಾದವರು ಮಾತನಾಡಿ ಪೋಲೀಸರ ಹಲ್ಲೆಯನ್ನು ಉಗ್ರವಾಗಿ ಪ್ರತಿಭಟಿಸಿದರು. ಸಭೆಯ ಅಧ್ಯಕ್ಷತೆಯನ್ನು ಕಾಂ. ಜಿ. ಎಸ್. ನಾಗರಾಜರು ವಹಿಸಿದ್ದರು. ○

ಸಂಘಸ್ಥಾಪನೆ

ಆಗಸ್ಟ್ 11ರಂದು ಬಂಟ್ವಾಳ ತಾಲ್ಲೂಕಿನ ಪಾಣೆಮಂಗಳೂರು ಫಿರ್ಕದ ಬೀಡಿ ಮಜೂರರ ಸಭೆಯೊಂದು ಕಾಂ. ಕೃಷ್ಣಪ್ಪ ಸಾಲಿಯಾನರ ಅಧ್ಯಕ್ಷತೆಯಲ್ಲಿ ಸೇರಿತ್ತು.

ಬೀಡಿಕೆಲಸಗಾರರ ಸಂಘಟನೆಯನ್ನು ವಿಸ್ತರಿಸುವ ದಿಸೆಯಲ್ಲಿ ಸಿ. ಐ. ಟಿ. ಯು. ನೇತೃತ್ವದಲ್ಲಿ ಬೀಡಿ ಲೇಬರ್ ಯೂನಿಯನ್ ಪಾಣೆಮಂಗಳೂರು ಫಿರ್ಕ ಎಂಬ ಹೆಸರಿನ ಸಂಘವನ್ನು ಸ್ಥಾಪನೆಮಾಡಲಾಯಿತು.

ಸಂಘಕ್ಕೆ ಅಧ್ಯಕ್ಷರಾಗಿ ಕಾಂ. ಕೃಷ್ಣಪ್ಪ ಸಾಲಿಯಾನ, ಉಪಾಧ್ಯಕ್ಷ ಕಾಂ. ಮೋನಪ್ಪ ಸಾಫಲ್ಯ, ಕಾರ್ಯದರ್ಶಿಯಾಗಿ ಕಾಂ. ಬಿ. ನಾರಾಯಣ, ಸಹಾಯಕ ಕಾರ್ಯದರ್ಶಿಯಾಗಿ ಕಾಂ. ಕೆ. ಪಿ. ಗೋಪಾಲ್ ಮತ್ತು ಕೋಶಾಧಿಕಾರಿಯಾಗಿ ಬಿ. ವಾಸು ಗಟ್ಟಿಯವರನ್ನು ಚುನಾಯಿಸಲಾಯಿತು. ●

ಬೃಹತ್ ಮತಪ್ರದರ್ಶನ

ಬೀಡಿಕಾರ್ಮಿಕರ ಬೇಡಿಕೆ ದಿನಾಚರಣೆಯ ಸಂಬಂಧವಾಗಿ ಕಳೆದ ಆಗಸ್ಟ್ 25ರಂದು ಮಂಗಳೂರಿನಲ್ಲಿ ಬೀಡಿಕಾರ್ಮಿಕರು ಬೃಹತ್ ಮತಪ್ರದರ್ಶನ ನಡೆಸಿದರು. ನಗರದಿಂದ, ದೂರದ ಗ್ರಾಮಾಂತರ ಪ್ರದೇಶಗಳಿಂದ ಸಹಸ್ರಾರು ಮಹಿಳಾ ಬೀಡಿ ಕಾರ್ಮಿಕರು ಮೆರವಣಿಗೆಯಲ್ಲಿ ಬಂದು ಜಿಲ್ಲಾಧಿಕಾರಿ ಕಚೇರಿಯ ಎದುರು ಮತಪ್ರದರ್ಶನ ನಡೆಸಿದರು. ಕಾಂ. ಕೆ. ಆರ್. ಶ್ರೀಯಾನ್, ಯು. ಬಿ. ಲೋಕಯ್ಯ, ಜನಾರ್ಧನ ನಾಯಕ್, ಜೆ. ವೀರಪ್ಪ, ಬಾಲಕೃಷ್ಣಶೆಟ್ಟಿ ಮೊದಲಾದವರಿದ್ದ ನಿಯೋಗವೊಂದು ಜಿಲ್ಲಾಧಿಕಾರಿಗಳನ್ನು ಕಂಡು ಮನವಿ ಸಲ್ಲಿಸಿದರು.

ಬಳಿಕ ಜರುಗಿದ ಸಭೆಯಲ್ಲಿ ಬೀಡಿ ಕಾರ್ಮಿಕರನ್ನುದ್ದೇಶಿಸಿ ಕಾಂ. ಕೆ. ಆರ್. ಶ್ರೀಯಾನ್‌ರು ಮಾತನಾಡಿ ಬೀಡಿ ಕಾರ್ಮಿಕರು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಚಳುವಳಿಯನ್ನು ಇನ್ನಷ್ಟು ತೀವ್ರಗೊಳಿಸಬೇಕೆಂದು ಕರೆ ನೀಡಿದರು.

●

ಸಂತಾಪ ಸೂಚಕ ಸಭೆ

6-9-81ರಂದು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಶಿವಮೊಗ್ಗ ಜಿಲ್ಲಾಸಮಿತಿಯು ಡಾ॥ ಕೃಷ್ಣೋಜಿಯವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಪೊಲಿಟ್‌ಬ್ಯೂರೋ ಸದಸ್ಯರೂ, ಶ್ರಮಜೀವಿವರ್ಗದ ನೇತಾರರೂ ಆದ ಕಾಂ. ಎ. ಬಾಲಸುಬ್ರಮಣ್ಯಂರವರ ನಿಧನಕ್ಕೆ 2 ನಿಮಿಷ ಮೌನ ಆಚರಿಸಿ ಸಂತಾಪ ವ್ಯಕ್ತಪಡಿಸಿತು. ○

ತಹಸೀಲ್ದಾರರ ಕಚೇರಿಗೆ ಘೇರಾವೊ

ಬೆಳಗಾವಿ ಜಿಲ್ಲೆಯ ಸವದತ್ತಿಯ ಬೀದಿಗಳಲ್ಲಿ ಚಿಕ್ಕಪುಟ್ಟ ಅಂಗಡಿಗಳನ್ನಿಟ್ಟು ತಮ್ಮ ಜೀವನವನ್ನು ಸಾಗಿಸಲು ಪ್ರಯತ್ನಿಸುತ್ತಿದ್ದ ಬಡವರ ಅಂಗಡಿಗಳನ್ನು ಧ್ವಂಸಮಾಡಿ ತುರ್ತು ಪರಿಸ್ಥಿತಿಯ ಕರಾಳದಿನಗಳನ್ನು ನೆನಪಿಸುವಂತೆ ಮಾಡಿದ ತಾಲ್ಲೂಕು ತಹಸೀಲ್ದಾರ ಹಾಗೂ ನಗರಸಭೆಯ ಆಡಳಿತಾಧಿಕಾರಿ ಶ್ರೀ ಖಾದರ ಅವರು ಬಡಜನತೆಯ ಉಗ್ರಪ್ರತಿಭಟನೆಯನ್ನು ಎದುರಿಸಬೇಕಾಯಿತು. ಅತಿಕ್ರಮಣವನ್ನು ತೆಗೆಯುವ ನೆಪದಲ್ಲಿ ರಸ್ತೆಯ ಬದಿಗಳಲ್ಲಿದ್ದ ಚಿಕ್ಕಪುಟ್ಟ ಅಂಗಡಿಗಳನ್ನು ಕಿತ್ತುಹಾಕಿ, ಅವರ ಕಪಾಟು ಪೆಟ್ಟಿಗೆ, ಡಬ್ಬ ಇತ್ಯಾದಿಗಳನ್ನು ವಶಪಡಿಸಿಕೊಂಡ ಈ ಅಧಿಕಾರಿ ದೊಡ್ಡದೊಡ್ಡ ಅಂಗಡಿಗಳಿಗೆ, ಶ್ರೀಮಂತರ ಮನೆಗಳಿಗೆ ಮಾತ್ರ ಕೈಹಚ್ಚಲಿಲ್ಲ. ತಮ್ಮ ಏಕಮೇವ ಜೀವನೋಪಾಯವನ್ನು ಕಳೆದುಕೊಂಡು ಕಂಗಾಲಾದ ಬಡಬಗ್ಗರು ದಿನಾಂಕ 28-8-1981 ರಂದು ಸಂಘಟಿತರಾಗಿ ಕಮ್ಯೂನಿಸ್ಟ್ ಪಕ್ಷದ ಕಾಂ. ಬಿ. ಎನ್. ಧಾರವಾಡಕರ್ ಮತ್ತು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಕಾಂ. ನಿತ್ಯಾನಂದ ಸ್ವಾಮೀಜಿ ಇವರ ಮುಂದಾಳತ್ವದಲ್ಲಿ ತಹಸೀಲ್ದಾರರ ಕಚೇರಿಗೆ ಯಶಸ್ವಿ ಘೇರಾವೊ ಹಾಕಿದರು! ಮಧ್ಯಾಹ್ನ 12 ಘಂಟೆಗೆ ಪ್ರಾರಂಭವಾದ ಘೇರಾವೊದಿಂದ ಸಂಜೆ 4ರ ವರೆಗೆ ಕಚೇರಿಯ ಕಾರ್ಯಕಲಾಪಗಳೆಲ್ಲಾ ಸ್ಥಗಿತಗೊಂಡು ಕಚೇರಿಯಿಂದ ಹೊರಕ್ಕೆ ಮತ್ತು ಹೊರಗಿನಿಂದ ಒಳಗೆ ಯಾರನ್ನೂ ಬಿಡಲಾಗಲಿಲ್ಲ. ಮೇಲಾಧಿಕಾರಿಗಳನ್ನು ಕಾಣಲು ಹೋದ ತಹಸೀಲ್ದಾರರು 4 ಘಂಟೆಗೆ ಬಂದಾಗ ದಿಕ್ಕೆಟ್ಟ ಬಡಬಗ್ಗರು "ತಹಸೀಲ್ದಾರರಿಗೆ ಧಿಕ್ಕಾರ, ನಗರಸಭೆಯ ಸಿಬ್ಬಂದಿಗೆ ಧಿಕ್ಕಾರ" ಎಂದು ಕೂಗುತ್ತಿದ್ದರು. ನಂತರ ನಡೆದ ಮಾತುಕತೆಯಲ್ಲಿ ಅಂಗಡಿಗಳನ್ನು ಕಳೆದುಕೊಂಡವರ ಪರವಾಗಿ ಕಾಂ. ನಿತ್ಯಾನಂದ ಸ್ವಾಮೀಜಿ ಹಾಗೂ ಕಾಂ. ಧಾರವಾಡಕರ ಅವರು ಯಾವ ಮುನ್ಸೂಚನೆ ಇಲ್ಲದೆ ಬಡಬಗ್ಗರ ಅಂಗಡಿಗಳನ್ನು ಕಿತ್ತುಹಾಕಿದ್ದನ್ನು ಉಗ್ರವಾಗಿ ಖಂಡಿಸಿದರು ಮಾತ್ರವಲ್ಲದೆ ಅತಿಕ್ರಮಣವನ್ನು ತೆಗೆಯುವ ಕಾರ್ಯವನ್ನು ಕೂಡಲೇ ನಿಲ್ಲಿಸಬೇಕೆಂದು ಒತ್ತಾಯಿಸಿದರು. ನಂತರ ಅಧಿಕಾರಿಗಳ ವಶದಲ್ಲಿ ವಶಪಡಿಸಿಕೊಂಡ ಸರಕುಗಳನ್ನು ಕೂಡಲೇ ಸುರಕ್ಷಿತವಾಗಿ ಹಿಂತಿರುಗಿಸಬೇಕೆಂದೂ, ಅವರಿಗಾದ ನಷ್ಟವನ್ನು ಸರಕಾರವು ತುಂಬಿಕೊಡಬೇಕೆಂದೂ ಮತ್ತು ಅವರಿಗೆ ಮೊದಲಿದ್ದ ಸ್ಥಳಗಳಲ್ಲೇ ಹಂಗಾಮಿ ಅಂಗಡಿಗಳನ್ನು ಇಟ್ಟು ಉಪಜೀವನ ಸಾಗಿಸಲು ಅನುಮತಿ ಕೊಡಬೇಕೆಂದು ಒತ್ತಾಯಿಸಲಾಯಿತು. ಜನತೆಯ ಸಂಘಟಿತ ಪ್ರತಿಭಟನೆಗೆ ತಹಸೀಲ್ದಾರ ಶ್ರೀ ಖಾದರ ಮಣಿದು ಅಂಗಡಿಗಳನ್ನು ಮೊದಲಿದ್ದ ಸ್ಥಳದಲ್ಲೇ ನಡೆಸಲು ಅನುಮತಿ ಇತ್ತರು. ಇಷ್ಟರೊಳಗೆ ಅತಿಕ್ರಮಣಗಳನ್ನು ತೆಗೆಯುತ್ತಿದ್ದ ನಗರಸಭೆಯ ಸಿಬ್ಬಂದಿಯ ಕ್ರಮಗಳನ್ನು ಜನತೆಯು ಒತ್ತಾಯಪೂರ್ವಕವಾಗಿ ನಿಲ್ಲಿಸಿದ್ದರು. ಈ ಬಡಬಗ್ಗರ ಹೋರಾಟವು ಯಶಸ್ವಿಯಾಗಲು ಸ್ಥಳೀಯ ಎಸ್.ಎಫ್.ಐ. ಘಟಕದ ವಿದ್ಯಾರ್ಥಿ ನಾಯಕರು ಬಹಳ ನೆರವಾಗಿದ್ದರು.

●

ಸುಂದತ್ತಾ ಕಾರ್ಮಿಕರ ವಿಜಯ

ಹುಬ್ಬಳ್ಳಿಯ ಖಾದ್ಯತೈಲಗಳ ಕಾರ್ಖಾನೆಯಾದ ಸುಂದತ್ತಾ ಫ್ಯಾಕ್ಟರಿಯಲ್ಲಿ ಸುಮಾರು 500 ಜನ ಕಾರ್ಮಿಕರು ಕೆಲಸಮಾಡುತ್ತಲಿರುವರು. 1973ರಲ್ಲಿ ಬಾಂಬೆಯ ಮಾಡರ್ನ್ ಮಿಲ್‌ಗೆ ಸೇರ್ಪಡೆಯಾಗುವವರೆಗೂ ಸುಂದತ್ತಾ ಮಿಲ್ ಸಿರೂರ್ ಕಂಪನಿಯವರ ಅಧೀನದಲ್ಲಿತ್ತು.

ಸರಿಯಾದ ಸಂಘಟನೆಯಿಲ್ಲದ ಕಾರ್ಮಿಕರನ್ನು ಸುಂದತ್ತಾ ಆಡಳಿತ ವರ್ಗವು ಅವ್ಯಾಹತವಾಗಿ ಶೋಷಿಸುತ್ತಿತ್ತು. ಖಾದ್ಯತೈಲದ ಬೆಲೆ ಕೆ.ಜಿ. ಒಂದಕ್ಕೆ 2ರೂ. ಇದ್ದ ಕಾಲದಲ್ಲಿ ಕಾರ್ಮಿಕನಿಗೆ 108ರೂ. ವೇತನ ಕೊಡುತ್ತಲಿದ್ದ ಸುಂದತ್ತಾ ಮಿಲ್ ಇಂದು ಕೆ.ಜಿ. ಒಂದಕ್ಕೆ 15ರೂ. ಇರುವ ಕಾಲದಲ್ಲಿ ಕಾರ್ಮಿಕನಿಗೆ ದೊರೆಯುತ್ತಿರುವ ಸಂಬಳ 182ರೂ. ಮಾತ್ರ.

ಸುಂದತ್ತಾ ಕಾರ್ಮಿಕಸಂಘ ಮೊದಲಿನಿಂದಲೂ ಸ್ವತಂತ್ರ ಸಂಘಟನೆಯಾಗಿ ಉಳಿದಿತ್ತು. ಇತ್ತೀಚಿನವರೆಗೆ ಸಿ.ಐ.ಟಿ.ಯು.ಗೆ ಸೇರ್ಪಡೆಯಾಗುವವರೆಗೂ ಅನೇಕ ಜನ ಧುರೀಣರು ಈ ಸಂಘದ ನಾಯಕತ್ವವನ್ನು ವಹಿಸಿದ್ದರು. ಎಂಟ್ಟಿ ಎಂಬೊಬ್ಬ ಧುರೀಣನ ಕಾಲದಲ್ಲಿ ವೇತನ ಕುರಿತು ಒಂದು ಒಪ್ಪಂದವಾಗಿತ್ತು. ಈ ಒಪ್ಪಂದದ ವಿಚಿತ್ರ ಅಂಶವೇನೆಂದರೆ ಬೆಲೆಸೂಚ್ಯಂಕ (CPI) ಏರಿದಂತೆಲ್ಲ ಏರಿಕೆಗೆ ತಕ್ಕ ತುಟ್ಟಿಭತ್ಯ ಸಿಕ್ಕುವ ಬದಲು ತುಟ್ಟಿಭತ್ಯೆಯ ದರ ಕಡಿಮೆ ಆಗುತ್ತಿತ್ತು. ಉದಾಹರಣೆಗೆ 1972ರಲ್ಲಿ ಒಂದು ಪಾಯಿಂಟಿಗೆ 22 ಪೈಸೆ ದೊರಕುತ್ತಿದ್ದರೆ, 1981ರಲ್ಲಿ ದರ ಒಂದು ಪಾಯಿಂಟಿಗೆ 8 ಪೈಸೆಗೆ ಇಳಿಯಿತು. 2000 (1939Base) ಸೂಚ್ಯಂಕದ ಮೇಲೆ ತುಟ್ಟಿಭತ್ಯೆ ಸ್ಥಗಿತವಾಗುತ್ತಿತ್ತು. ಅದ್ಭುತ ಒಪ್ಪಂದ! ಈ ಒಪ್ಪಂದ 1983ರ ಡಿಸೆಂಬರ್‌ವರೆಗೆ ಜಾರಿಯಲ್ಲಿರುವುದು.

ಕೆಲವು ದಿನಗಳ ಹಿಂದೆ ಈ ಮಿಲ್ಲಿನಲ್ಲಿದ್ದ ಎರಡೂ ಯೂನಿಯನ್‌ಗಳು ಸಿ.ಐ.ಟಿ.ಯು. ಸಂಘಟಕರನ್ನು ಭೇಟಿಮಾಡಿ ಎರಡೂ ಸಂಘಗಳು ಒಳಗೊಂಡ ಕಮಿಟಿಯೊಂದನ್ನು ಮಾಡಿ ಕಾಂ. ವಿ. ಜೆ. ಕೆ. ನಾಯರ್‌ರನ್ನು ಚೇರ್‌ಮನ್‌ರಾಗಿ ಆಯ್ಕೆಮಾಡಲಾಯಿತು. ಕಾರ್ಮಿಕರ ತುಟ್ಟಿಭತ್ಯೆ ಸ್ಥಗಿತವಾಗಿದ್ದ ಕಾರಣ, ತುಟ್ಟಿಭತ್ಯೆಯನ್ನು ಹೆಚ್ಚುಮಾಡಲು ಈ ಕಮಿಟಿಯು ಮಧ್ಯಾಂತರ ಆಡಳಿತವರ್ಗವನ್ನು ಒತ್ತಾಯಿಸಲಾಯಿತು. 10-8-81 ರಂದು ನಡೆದ ಎರಡೂ ಯೂನಿಯನ್‌ಗಳ ಸಂಯುಕ್ತ ಕಾರ್ಯಕಾರಿ ಸಮಿತಿಯಲ್ಲಿ ಈ ಕೆಳಕಂಡ ವಿಷಯಗಳನ್ನು ತೀರ್ಮಾನಿಸಲಾಯಿತು.

1. ಎರಡೂ ಯೂನಿಯನ್‌ಗಳನ್ನು ಸಿ. ಐ. ಟಿ. ಯು.ಗೆ ನೊಂದಾಯಿಸುವದು.

2. ಸುಂದತ್ತಾ ವರ್ಕರ್ಸ್ ಯೂನಿಯನ್‌ಗೆ ಕಾಂ. ವಿಜೆಕೆ ಯವರನ್ನು ಪ್ರಧಾನಕಾರ್ಯದರ್ಶಿಯನ್ನಾಗಿ ಚುನಾಯಿಸಲಾಯಿತು.

3. ಬೇಡಿಕೆಯನ್ನು ಒತ್ತಾಯಿಸುವುದಕ್ಕಾಗಿ 11-8-81ರಂದು ಒಂದು ದಿನದ ಸಾಂಕೇತಿಕ ಮುಷ್ಕರ ಹೂಡುವುದು.

11-8-81ರಂದು ಒಂದು ದಿನದ ಯಶಸ್ವೀ ಸಾಂಕೇತಿಕ ಮುಷ್ಕರದ ನಂತರ ಆಡಳಿತವರ್ಗ ಮಾತುಕತೆಗೆ ಆಹ್ವಾನಿಸಿತು. ಕಾಂ. ವಿಜೆಕೆ ನಾಯರ್ ನೇತೃತ್ವದ ಕಾರ್ಮಿಕರ ನಿಯೋಗವೊಂದು ಆಡಳಿತವರ್ಗವನ್ನು ಭೇಟಿಮಾಡಿತು. ಮೂರು ದಿನಗಳ ಸತತ ಮಾತುಕತೆಯ ನಂತರವೂ ಯಾವುದೇ ತೀರ್ಮಾನಕ್ಕೆ ಬರಲು ಸಾಧ್ಯವಾಗದ ಕಾರಣ 13-8-81ರಂದು ಸಂಜೆ ನಡೆದ ಕಾರ್ಮಿಕರ ಸರ್ವಸದಸ್ಯರ ಸಭೆಯಲ್ಲಿ ಅನಿರ್ಧಿಷ್ಟಾವಧಿಯ ಮುಷ್ಕರ ಹೂಡಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಈ ತೀರ್ಮಾನದ ರೀತ್ಯ ಎರಡು ದಿನ ನಡೆದ ಯಶಸ್ವೀ ಮುಷ್ಕರದ ನಂತರ ಆಡಳಿತವರ್ಗ ತನ್ನ ಮೊಂಡುತನವನ್ನು ಬಿಟ್ಟು ತಾತ್ಕಾಲಿಕ ಪರಿಹಾರವಾಗಿ ಪ್ರತಿ ಕಾರ್ಮಿಕನಿಗೆ, ಪ್ರತಿ ತಿಂಗಳೂ 43 ರೂ. ಕೊಡಲು ಒಪ್ಪಿಕೊಂಡಿತು.

ಅಲ್ಲದೇ ತುಟ್ಟಿಭತ್ಯೆಯ ಕುರಿತು, ಹೊಸ ವೇತನ ಒಪ್ಪಂದವಾಗುವುದರ ಕುರಿತು 30-9-81ರೊಳಗೆ ಮಾತುಕತೆ ನಡೆಸಲು ಆಡಳಿತವರ್ಗ ಒಪ್ಪಿಕೊಂಡಿದೆ. ನಂತರ ಕಾರ್ಮಿಕರು ತಮ್ಮ ಮುಷ್ಕರವನ್ನು ಹಿಂತೆಗೆದುಕೊಳ್ಳಲು ತೀರ್ಮಾನಿಸಿದರು. ಈ ಬೆಳವಣಿಗೆಗಳು ಕಾರ್ಮಿಕರ ನೈತಿಕ ಸ್ಥೈರ್ಯವನ್ನು ಹೆಚ್ಚಿಸಿವೆ. ●

ಪ್ಲೈವುಡ್ ಕಾರ್ಮಿಕರು ಸಂಘಟನೆಯ ಹಾದಿಯಲ್ಲಿ

ದಾಂಡೇಲಿಯ ಪ್ಲೈವುಡ್ ಕಾರ್ಖಾನೆಯಲ್ಲಿ ಸಂಘಟನೆ ಕಟ್ಟಲು ನಡೆಯುವ ಎಲ್ಲ ಪ್ರಯತ್ನಗಳನ್ನು ಚೂರುಮಾಡಿದ ಪರಂಪರೆ ಆ ಕಾರ್ಖಾನೆಯ ಆಡಳಿತವರ್ಗದ್ದು. ಕೆಲವು ಮನೆಮುರುಕರಿಂದ ಈ ಸಂಘಟನೆಯ ಯತ್ನ ಪ್ರಯತ್ನಭಗ್ನವಾಗಿತ್ತು.

ಇತ್ತೀಚೆಗೆ ಸಮರಶೀಲ ಸಂಘಟನೆಯಾದ ಸಿ. ಐ. ಟಿ. ಯು.ನ ನೇತೃತ್ವದಲ್ಲಿ ಸಂಘಟನೆ ಕಟ್ಟುವ ಕೆಲವು ಪ್ರಯತ್ನಗಳು ನಡೆದಿವೆ. 1-9-81 ರಂದು ಪ್ಲೈವುಡ್ ಆಡಳಿತವರ್ಗ 35ರೂ. ಬಕ್ಷೀಸನ್ನು ಕೊಡುವುದಾಗಿ ನಿರ್ಧರಿಸಿದ್ದು ಈ ಹಣವನ್ನು 2-9-81ರಂದು ತೆಗೆದುಕೊಳ್ಳಬೇಕೆಂದು ನೋಟೀಸನ್ನು ಹಾಕಿದ್ದರು.

ಈ ಹಣ ತೆಗೆದುಕೊಳ್ಳಲು ತಮ್ಮ ಅಸಮ್ಮತಿ ವ್ಯಕ್ತಪಡಿಸಿದ ಕಾರ್ಮಿಕರು ಯಾರೂ ಹಣ ತೆಗೆದುಕೊಳ್ಳಕೂಡದೆಂದು ತಮ್ಮಲ್ಲೇ ನಿರ್ಧರಿಸಿದರು. ಅಂದು ರಾತ್ರಿ ಡಬ್ಲ್ಯೂ. ಸಿ. ಪಿ. ಎಂ.ನ ಕಾರ್ಮಿಕ ನಾಯಕರನ್ನು ಭೇಟಿಮಾಡಿ ಚಿಕ್ಕ ಸಭೆಯನ್ನು ನಡೆಸಿದರು.

ಮರುದಿನ 2-3 ನಿಷ್ಟ (ಚಮಚಾ) ಕಾರ್ಮಿಕರು ಈ ಹಣವನ್ನು ಸ್ವೀಕರಿಸಿದ್ದರಿಂದ ಕುಪಿತರಾದ ಇತರ ಕಾರ್ಮಿಕರು ಅವರಿಗೆ ಎಚ್ಚರಿಕೆ ಕೊಟ್ಟರು. ಕಾರ್ಮಿಕರು ಸಂಘಟಿತರಾಗುತ್ತಿರುವ ಪ್ರಯತ್ನಗಳ ವಾಸನೆಹಿಡಿದ ಆಡಳಿತ ವರ್ಗ ಪೋಲೀಸರನ್ನು ಕರೆಯಿಸಿ ಕಾರ್ಮಿಕರಿಗೆ ಪಾಠಕಲಿಸಲು ತಿಳಿಸಿತು. ಮಾಲೀಕರ ಈ ಪ್ರಚೋದನೆ ಪೋಲೀಸರಿಗೆ ಹೆಂಡಕುಡಿಸಿದ ಮಂಗಕ್ಕೆ ಚೇಳು ಕಡಿಸಿದಂತಾಯಿತು. ಕಾರ್ಮಿಕರ ಕಾಲನಿಗೆ ತೆರಳಿ ಮನೆಮನೆಗೆ ನುಗ್ಗಿ ಹೆಂಗಸರು ಮಕ್ಕಳೆನ್ನದೇ ಎಲ್ಲರನ್ನು ಥಳಿಸಿದರು.

ವಿಷಯ ಗೊತ್ತಾದೊಡನೆ ಕಾಂ. ಉಮೇಶನಾಯ್ಕ, ಭಾಸ್ಕರನಾಯ್ಕ, ಮನೋಹರನಾಯ್ಕ, ಕಲ್ಕುಟಕರ, ಕಾಶೀಮುಖಾನ, ಉಮೇಶಮಲ್ಯ, ಟಿ. ಎಸ್. ನಾಯ್ಕ ಮೊದಲಾದವರೆಲ್ಲ ಸ್ಥಳಕ್ಕೆಧಾವಿಸಿನೊಂದವರನ್ನುಸ್ವಾಂತನ ಪಡಿಸಿದರು. ಸುಮಾರು 1000 ಜನ ಪ್ಲೈವುಡ್ ಕಾರ್ಮಿಕರು ಸಮಾವೇಶಗೊಂಡು ಭಾರೀ ಮೆರವಣಿಗೆ ಹೊರಡಿಸಿದರು.

ನಂತರ ಪ್ಲೈವುಡ್ ಕಾರ್ಖಾನೆಯ ಗೇಟ್ ಎದುರು ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡಿದ ಕಾಂ. ಉಮೇಶನಾಯ್ಕರು ಪೋಲೀಸರ ಹಲ್ಲೆಯನ್ನು ಉಗ್ರವಾಗಿ ಖಂಡಿಸಿದರು. ಮ್ಯಾನೇಜ್‌ಮೆಂಟಿನ ಕುತಂತ್ರವನ್ನು ಬಯಲಿಗೆಳೆದ ಕಾಂ. ಉಮೇಶ್, ಯಾವುದೇ ಬೆದರಿಕೆಗೆ ಜಗ್ಗದೇ ಸಂಘಟಿತರಾಗಬೇಕೆಂದು ಕರೆನೀಡಿದರು. o

ಡಿ.ವೈ.ಎಫ್.ಐ.ಯ ದ.ಕ. ಜಿಲ್ಲಾ ಸಮ್ಮೇಳನ

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್‌ನ ಪ್ರಥಮ ದ.ಕ. ಜಿಲ್ಲಾ ಸಮ್ಮೇಳನವು ತಾರೀಕು 28-8-1981ರಂದು ಮಂಗಳೂರಿನಲ್ಲಿ ಜರುಗಿತು. ಸಮ್ಮೇಳನದ ಅಧ್ಯಕ್ಷಸ್ಥಾನವನ್ನು ಶ್ರೀ ಆನಂದ ಉಳ್ಳಾಲ್ ವಹಿಸಿದ್ದರು. ಪ್ರಾರಂಭದಲ್ಲಿ ಶ್ರೀ ಯು.ಬಿ. ನಾರಾಯಣ ಅವರು ಪ್ರತಿನಿಧಿಗಳನ್ನು ಸ್ವಾಗತಿಸಿದರು. ಯುವಜನ ಫೆಡರೇಷನ್‌ನ ರಾಜ್ಯಸಂಚಾಲಕರಾದ ಕಾಂ. ಜಿ.ವಿ. ಶ್ರೀರಾಮರೆಡ್ಡಿಯವರು ಸಮ್ಮೇಳನವನ್ನು ಉದ್ಘಾಟಿಸುತ್ತಾ, ನಮ್ಮ ದೇಶವಲ್ಲಿ ಯುವಜನರು ನಡೆಸಿದ ಹೋರಾಟ ಹಾಗೂ ಇಂದಿನ ಆರ್ಥಿಕ ಸಾಮಾಜಿಕ ಪರಿಸ್ಥಿತಿಗಳನ್ನು ವಿವರಿಸಿದರು. ನಮ್ಮ ದೇಶದಲ್ಲಿ ಯುವಕರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಮಾತನಾಡುತ್ತಾ ಅಖಿಲಭಾರತ ಮಟ್ಟದಲ್ಲಿ ಯುವಜನರ ಸಂಘಟನೆಯ ರಚನೆ ಇತ್ತೀಚಿನ ಬೆಳವಣಿಗೆಯ ಕುರಿತು ಸಭೆಗೆ ವಿವರಿಸಿದರು. ಸಮಸ್ಯೆಗಳ ವಿರುದ್ಧ ಸಂಘಟಿತ ಹೋರಾಟಕ್ಕೆ ಹೆಚ್ಚಿನ ಮಹತ್ವವನ್ನು ನೀಡಿ, ಸಂಘಟನೆ ಮತ್ತು ಹೋರಾಟವನ್ನು ಬೆಳೆಸುತ್ತಾ ಇತರ ಪ್ರಜಾಪ್ರಭುತ್ವ ಹಾಗೂ ಸಮಾನ ಅಭಿಪ್ರಾಯಗಳುಳ್ಳ ಸಂಘಟನೆಗಳ ಜತೆ ಸೇರಿ ಸಮಾಜದ ಮೂಲಭೂತ ಬದಲಾವಣೆಗೆ ಶ್ರಮಿಸಬೇಕೆಂದು ಯುವಕರಿಗೆ ಕರೆನೀಡಿದರು.

ಶ್ರೀ ರಮೇಶ್ ಬಿ. ಉಳ್ಳಾಲ್ ಅವರು ಮಂಡಿಸಿದ ವರದಿಯಮೇಲಿನ ಚರ್ಚೆಯಲ್ಲಿ 8 ಪ್ರತಿನಿಧಿಗಳು ಭಾಗವಹಿಸಿದರು. ವರದಿಯನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಸಮ್ಮೇಳನದಲ್ಲಿ ಈ ಕೆಳಗಿನ ಠರಾವುಗಳನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

1. ಅಗತ್ಯಸೇವಾ ಅಧ್ಯಾದೇಶವನ್ನು ವಿರೋಧಿಸುವ,

2. ಎಲ್ಲರಿಗೂ ಉದ್ಯೋಗಕೊಡಬೇಕೆಂದೂ, ಉದ್ಯೋಗ ದೊರಕುವತನಕ ನಿರುದ್ಯೋಗ ಭತ್ಯೆ ಸಿಗಬೇಕೆಂದು ಸರಕಾರವನ್ನು ಒತ್ತಾಯಿಸುವ,

3. ಮಹಿಳೆಯರ ಮೇಲಿನ ಅತ್ಯಾಚಾರವನ್ನು ಖಂಡಿಸುವ ಠರಾವುಗಳನ್ನು ಅಂಗೀಕರಿಸಲಾಯಿತು.

ಸಮ್ಮೇಳನದಲ್ಲಿ ಮುಖ್ಯ ಅತಿಥಿಗಳಾಗಿ ಕಾಂ. ಬಿ. ಮಾಧವ ಹಾಗೂ ಕಾಂ. ಕೆ. ಶಂಕರ್ ಅವರು ಸಭೆಯಲ್ಲಿ ಮಾತನಾಡುತ್ತಾ, ಇಂದಿನ ಈ ಪರಿಸ್ಥಿತಿಯಲ್ಲಿ ಯುವಜನರ ಸಮಸ್ಯೆಗಳು ದಿನದಿಂದ ದಿನಕ್ಕೆ ಜಾಸ್ತಿಯಾಗುತ್ತಾ ಹೋಗುವುದನ್ನು ವಿವರಿಸಿ ಯುವಜನರ ಸಂಘಟನೆ ಅನಿವಾರ್ಯವಾಗಿದ್ದು ಈ ಸಿಟ್ಟಿನಲ್ಲಿ ಎಲ್ಲರೂ ಶಕ್ತಿಮೀರಿ ಪ್ರಯತ್ನಿಸಬೇಕೆಂದು ಪ್ರತಿನಿಧಿಗಳನ್ನು ವಿನಂತಿಸಿದರು. ಸಮ್ಮೇಳನಕ್ಕೆ ಸಿ. ಆರ್. ಭಟ್ (ಸಮುದಾಯದ ಕೇಂದ್ರಸಮಿತಿ ಸದಸ್ಯರು) ಅವರು ಶುಭ ಕೋರಿದರು.

ನಂತರ ಹೊಸ ಜಿಲ್ಲಾ ಸಮಿತಿಗೆ ಈ ಕೆಳಗಿನವರನ್ನು ಆರಿಸಲಾಯಿತು.

ಅಧ್ಯಕ್ಷರಾಗಿ ಶ್ರೀ ಶಿವಾನಂದ ಕೋಡಿ (ಕುಂದಾಪುರ) ಉಪಾಧ್ಯಕ್ಷರಾಗಿ ಶ್ರೀ ವಿ. ರಮೇಶ್ (ಉಡುಪಿ) ಕಾರ್ಯದರ್ಶಿಯಾಗಿ ಶ್ರೀ ರಮೇಶ್ ಬಿ. ಉಳ್ಳಾಲ್ (ಮಂಗಳೂರು) ಕೋಶಾಧಿಕಾರಿಯಾಗಿ ಶ್ರೀ. ಭುಜಂಗ ಮಾರ್ಲ (ಮಂಗಳೂರು) ಜತೆ ಕಾರ್ಯದರ್ಶಿಯಾಗಿ ಶ್ರೀ ಪದ್ಮನಾಭ(ಮಂಗಳೂರು) ಹಾಗೂ ಕಾರ್ಯಕಾರಿ ಸಮಿತಿಗೆ ಶ್ರೀಗಳಾದ ಶಂಕರ ಖಾರ್ವಿ, ಮಂ. ಮಹಾಬಲ, ಲಕ್ಷಣ, ಆನಂದ್ ಉಳ್ಳಾಲ್, ಯು. ಬಿ. ನಾರಾಯಣ, ವಿಲ್ಫ್ರಿಡ್ ಡಿ.ಸೋಜ, ಎಸ್. ಸುಬ್ರಮಣ್ಯ ಭಟ್, ಶೀನ ಬಂಗೇರರವರನ್ನೊಳಗೊಂಡ 13 ಮಂದಿಯನ್ನು ಆರಿಸಲಾಯಿತು.

ಸಮ್ಮೇಳನಕ್ಕೆ ಮಂಗಳೂರು, ಉಡುಪಿ, ಕುಂದಾಪುರ, ಪುತ್ತೂರು, ಬಂಟ್ವಾಳ, ತಾಲ್ಲೂಕುಗಳಿಂದ ಪ್ರತಿನಿಧಿಗಳು ಭಾಗವಹಿಸಿದ್ದರು. ನೂತನ ಕಾರ್ಯದರ್ಶಿ ರಮೇಶ್ ಬಿ. ಉಳ್ಳಾಲ್‌ರ ಧನ್ಯವಾದದೊಂದಿಗೆ ಸಮ್ಮೇಳನವು ಯಶಸ್ವಿಯಾಗಿ ಮುಕ್ತಾಯವಾಯಿತು. ●

ಸಿ·ಐ·ಟಿ·ಯು·ಗೆ ಸೇರ್ಪಡೆ

ದಿನಾಂಕ 6-9-81ರಂದು ಬಿ. ಬಿ.ಎಲ್. ವರ್ಕರ್ಸ್ ಯೂನಿಯನ್‌ನ ಸರ್ವಸದಸ್ಯರ ಸಭೆಸೇರಿ ಯೂನಿಯನ್ನನ್ನು ಸಿ. ಐ. ಟಿ. ಯು.ಗೆ ಸೇರ್ಪಡಿಸುವ ತೀರ್ಮಾನವನ್ನು ಕಾರ್ಮಿಕರು ಕೈಗೊಂಡರು. ಸಭೆಯ ಅಧ್ಯಕ್ಷತೆಯನ್ನು ಯೂನಿಯನ್ನಿನ ಅಧ್ಯಕ್ಷ ಕಾಂ. ಎಂ. ಮುನಿಸ್ವಾಮಿಯವರು ವಹಿಸಿದ್ದರು. ಈ ನಿರ್ಣಯವನ್ನು ಯೂನಿಯನ್ನಿನ ಪ್ರಧಾನಕಾರ್ಯದರ್ಶಿ ಕಾಂ. ಎಂ. ಎಸ್. ಸಿ. ರಾವ್ ಮಂಡಿಸಿದಾಗ ನೆರೆದಿದ್ದ ಕಾರ್ಮಿಕರು ಹರ್ಷೋದ್ಗಾರಗಳಿಂದ ಸ್ವಾಗತಿಸಿದರು.

ಅತಿಥಿಗಳಾಗಿ ಆಗಮಿಸಿದ ಸಿ. ಐ. ಟಿ. ಯು. ಕರ್ನಾಟಕ ರಾಜ್ಯಸಮಿತಿಯ ಅಧ್ಯಕ್ಷ ಕಾಂ. ಎಸ್. ಸೂರ್ಯನಾರಾಯಣರಾವರು ಈ ನಿರ್ಣಯವನ್ನು ಸ್ವಾಗತಿಸುತ್ತ ದೇಶದ ಕಾರ್ಮಿಕರ ಹೋರಾಟದ ಚರಿತ್ರೆಯಲ್ಲಿ ಸಿ. ಐ. ಟಿ. ಯು.ವಿನ ಸ್ಮರಣೀಯ ಪಾತ್ರದ ಕುರಿತು ವಿವರಿಸಿದರು. ಸಿ. ಐ. ಟಿ. ಯು.ವನ್ನು ಬಲಪಡಿಸಲು ಕರೆನೀಡಿದರು.

1980-81ರ ಸಾಲಿಗೆ ಶೇಕಡ 20ರ ಬೋನಸ್ಸಿಗಾಗಿ ಒತ್ತಾಯಿಸುವ ಮತ್ತು ಕ್ರಿಯಾಶೀಲ ಕಾರ್ಮಿಕರ ವಿರುದ್ಧ ಆಡಳಿತವರ್ಗ ಕೈಗೊಂಡ ಕ್ರಮವನ್ನು ಖಂಡಿಸುವ ಗೊತ್ತುವಳಿ ಸ್ವೀಕರಿಸಲಾಯಿತು.

ಆರಂಭದಲ್ಲಿ ಇತ್ತೀಚೆಗೆ ನಿಧನರಾದ ಕಾಂ. ವಿ. ಬಾಲಸುಬ್ರಮಣ್ಯಂರ ನಿಧನಕ್ಕೆ ಸಂತಾಪ ವ್ಯಕ್ತಪಡಿಸಲಾಯಿತು. ●

ಕಾರ್ಮಿಕಸಂಘಗಳ ಒಕ್ಕೂಟ (CONFEDERATION)ಕ್ಕೆ ಸಿ. ಐ. ಟಿ. ಯು. ಜನರಲ್ ಕೌನ್ಸಿಲ್‌ನ ಕರೆ

ಆಗಸ್ಟ್ 21ರಿಂದ 24ರ ವರೆಗೆ ಪ. ಬಂಗಾಲದ ಹೌರಾದ ಬಾಲ್ಲಿ (Bally) ಎಂಬಲ್ಲಿ ಸಿ. ಐ. ಟಿ. ಯು. ಜನರಲ್ ಕೌನ್ಸಿಲ್‌ನ ಸಭೆ ಸೇರಿತ್ತು. ಒಪ್ಪಿತ ಕಾರ್ಯಕ್ರಮದ ಆಧಾರದ ಮೇಲೆ ಕಾರ್ಮಿಕವರ್ಗದ ಹಿತರಕ್ಷಣೆಗಾಗಿ ಕಾರ್ಮಿಕಸಂಘಗಳ ಮತ್ತು ಫೆಡರೇಷನ್‌ಗಳ ಒಕ್ಕೂಟವೊಂದನ್ನು ರಚಿಸಲು ಸಿ. ಐ. ಟಿ. ಯು. ಜನರಲ್ ಕೌನ್ಸಿಲ್ ಮತ್ತೊಂದು ಸಲಹೆ ಮಾಡಿದೆ.

4 ದಿನಗಳು ನಡೆದ ಜನರಲ್ ಕೌನ್ಸಿಲ್ ಸಭೆಯಲ್ಲಿ 6ನೆಯ ಪಂಚವಾರ್ಷಿಕ ಯೋಜನೆಯ ಕುರಿತು, ಆಳವಾಗುತ್ತಿರುವ ಆರ್ಥಿಕ ಬಿಕ್ಕಟ್ಟನ್ನು ಕುರಿತು, ಮುಷ್ಕರ ನಿಷೇಧಿಸುವ ಸುಗ್ರೀವಾಜ್ಞೆಯ ಕುರಿತು, ಎಡ ಪಾಮರಂಗ ಸರಕಾರಗಳನ್ನು ಉರುಳಿಸುವ ಕೇಂದ್ರಸರಕಾರದ ಸಂಚಿನ ಕುರಿತು, ಕಾರ್ಮಿಕವರ್ಗದ ಐಕ್ಯತೆಗೆ ಮಾರಕವಾಗಿರುವ ವಿಚ್ಛಿದ್ರಕಾರಿ ಶಕ್ತಿಗಳು ಮತ್ತು ಸಾಮ್ರಾಜ್ಯಶಾಹಿ ಶಕ್ತಿಗಳು ದೇಶದ ಐಕ್ಯತೆಗೆ ಮತ್ತು ಸುಭದ್ರತೆಗೆ ಮಾರಕವಾಗಿರುವುದರ ಕುರಿತು ದೀರ್ಘವಾಗಿ ಚರ್ಚಿಸಲಾಯಿತು.

ಸಭೆ ನಡೆದ ಸ್ಥಳ (venue) ಕ್ಕೆ ಸಿ. ಐ. ಟಿ. ಯು. ವರ್ಕಿಂಗ್ ಕಮಿಟಿಯ ಸದಸ್ಯರೂ, ಖ್ಯಾತ ಕಾರ್ಮಿಕ ನಾಯಕರೂ ಆಗಿದ್ದ ದಿ। ಕಾಂ. ದಿನೇನ್ ಭಟ್ಟಾಚಾರ್ಯ ಅವರ ಹೆಸರನ್ನಿಡಲಾಗಿತ್ತು. ಸಭೆ ನಡೆದ ಸ್ಥಳದ ಸುತ್ತಮುತ್ತ ಸುಮಾರು 20 ಕಿ.ಮಿ. ಅಂತರದ ವರೆಗೆ ಕೆಂಬಾವುಟಗಳಿಂದ ರಸ್ತೆಗಳನ್ನು ಅಲಂಕರಿಸಲಾಗಿತ್ತು.

ಸಿ. ಐ. ಟಿ. ಯು. ಅಧ್ಯಕ್ಷ ಕಾಂ. ಬಿ. ಟಿ. ರಣದಿವೆಯವರಿಂದ ಸಿ. ಐ. ಟಿ. ಯು. ಧ್ವಜಾರೋಹಣದ ನಂತರ ಹುತಾತ್ಮರಿಗೆ ವಂದನೆ ಸಲ್ಲಿಸಲಾಯಿತು. 198 ಪ್ರತಿನಿಧಿಗಳು ಮತ್ತು 22 ವೀಕ್ಷಕರು ಸಭೆಯಲ್ಲಿ ಪಾಲ್ಗೊಂಡಿದ್ದರು. ಕಳೆದ ಒಂದು ವರ್ಷದ ಅವಧಿಯಲ್ಲಿ ಅಗಲಿದ ಕಾಂ. ಅಲೆಕ್ಸಿ ಕೋಸಿಗಿನ್, ಸೂಂಗ್ ಚಿಂಗ್‌ಲಿಂಗ್, ಭೂಪೇಶ್‌ಗುಪ್ತಾ, ದಿನೇಶ ಮುಜುಂದಾರ, ಪಿ. ಸಿ. ಜೋಶಿ, ಎಸ್. ವೆಂಕಟರಾಮ್ ಮತ್ತು ಕಾಂ. ಬಾಲ್‌ದಂಡವತೆಯವರ ನಿಧನಕ್ಕೆ ಶ್ರದ್ಧಾಂಜಲಿಯನ್ನರ್ಪಿಸಿತು.

ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಕಾಂ. ಬಿ. ಟಿ. ರಣದಿವೆಯವರು ದೇಶದ ರಾಜಕೀಯ ಪರಿಸ್ಥಿತಿ, ಕಾರ್ಮಿಕರ ಸ್ಥಿತಿಗತಿ ಕುರಿತು ದೀರ್ಘ ವಿವರಣೆ ನೀಡಿದರು. ಪ. ಬಂಗಾಲ, ಕೇರಳ ಮತ್ತು ತ್ರಿಪುರಾ ಸರಕಾರಗಳನ್ನು ಉರುಳಿಸುವ ಸಂಚನ್ನು ಬಯಲಿಗೆಳೆದರು. ಸರ್ವಾಧಿಕಾರದ ವಿರುದ್ಧ ಹೋರಾಟವನ್ನು ತೀವ್ರಗೊಳಿಸಲು ಕಾರ್ಮಿಕವರ್ಗಕ್ಕೆ ಕರೆ ನೀಡಿದರು. (ಕಾಂ. ಬಿ. ಟಿ. ಆರ್.ರ ಭಾಷಣದ ಪೂರ್ತಿ ಅನುವಾದವನ್ನು ನಂತರ ಪ್ರಕಟಿಸಲಾಗುವುದು.)

ತಮ್ಮ ವರದಿಯನ್ನು ಮಂಡಿಸಿದ ಸಿ. ಐ. ಟಿ. ಯು. ಪ್ರಧಾನ ಕಾರ್ಯದರ್ಶಿ ಕಾಂ. ಪಿ. ರಾಮಮೂರ್ತಿಯವರು ಬಾಂಬೈ ಸಮಾವೇಶದ ಪ್ರಾಮುಖ್ಯತೆಯ ಬಗ್ಗೆ ಗಮನ ಸೆಳೆದರು. ಬಾಂಬೈ ಸಮಾವೇಶದ ತೀರ್ಮಾನಗಳನ್ನು ಜಾರಿಗೊಳಿಸಲು ಸಿ. ಐ. ಟಿ. ಯು. ಕಾರ್ಯಕರ್ತರು ಅವಿರತ ಶ್ರಮಿಸಬೇಕೆಂದು ತಿಳಿಸಿದರು. ಕಾಂ.ಪಿ.ಆರ್. ಮುಂದುವರೆದು ಜಂಟೀ ಕಾರ್ಯಾಚರಣೆಗಳ ಅವಶ್ಯಕತೆಯ ಬಗ್ಗೆ, ದಬ್ಬಾಳಿಕೆಯನ್ನು ಎದುರಿಸುತ್ತಿರುವವರ ಕುರಿತ ಸೌಹಾರ್ದ ಕಾರ್ಯಾಚರಣೆಗಳ ಬಗ್ಗೆ ವಿವರಿಸಿದರು. ಕಾರ್ಮಿಕರ ಪ್ರಜ್ಞೆಯ ಮಟ್ಟವನ್ನು ಹೆಚ್ಚಿಸುವಲ್ಲಿ ಕೈಗೊಳ್ಳಬೇಕಾದ ಕ್ರಮಗಳನ್ನು ಕುರಿತು ತಿಳಿಸಿದ ಕಾಂ. ಪಿ. ಆರ್. ದುಡಿಯುವ ಮಹಿಳೆಯರ ಸಂಘಟನೆಯನ್ನು ಬಲಪಡಿಸುವ ಅಗತ್ಯದ ಕುರಿತು ತಿಳಿಸಿ ತಮ್ಮ ವರದಿಯನ್ನು ಪೂರ್ಣಗೊಳಿಸಿದರು.

ನಿರ್ಣಯಗಳ ಉಪಸಮಿತಿ (Resolutions Sub-committee)ಯನ್ನು ಚುನಾಯಿಸಲಾಯಿತು. ಈ ಉಪಸಮಿತಿಯಲ್ಲಿ ಕಾಂ. ನೃಸಿಂಗ್ ಚಕ್ರವರ್ತಿ (ಕನ್ವೀನರ್), ಎನ್. ಪ್ರಸಾದರಾವ್, ಪಿ. ಕೆ. ಕುರ್ಣೆ, ಕೆ. ಎನ್. ರವೀಂದ್ರನಾಥ, ಶಾಂತಿ ಘಟಕ, ಸುನೀಲ ಬಸುರಾಯ್ ಮತ್ತು ಕಾಂ. ಮದನ್ ಫಡ್ನೀಸ್ ಇವರುಗಳಿದ್ದರು.

ಕ್ರೆಡನ್ಸಿಯಲ್ ಕಮಿಟಿಯನ್ನು ಚುನಾಯಿಸಲಾಯಿತು. ಈ ಕಮಿಟಿಯಲ್ಲಿ ಕಾಂ. ಎ. ನಲ್ಲಶಿವಂ (ಕನ್ವೀನರ್), ಎಸ್. ಸೂರ್ಯನಾರಾಯಣರಾವ್, ಚಂಡೀಪ್ರಸಾದ್, ಕಾಳಿ ಘೋಷ ಮತ್ತು ಕಾಂ. ಟಿ. ಎನ್. ನಂಬಿರಾಜನ್ ಇವರುಗಳಿದ್ದರು.

ಕಾಂ. ಎಂ. ಕೆ. ಪಂಧೆಯವರು ಕೆಲಸದ ವರದಿ (Work Report) ಯನ್ನು ಒಪ್ಪಿಸಿದರು. ಕೈಗಾರಿಕಾವಾರು ಕೈಗೊಂಡ ಕ್ರಮಗಳ ಕುರಿತು ಕಾಂ. ಪಂಧೆ ವಿವರಿಸಿದರು. ಸಿ. ಐ. ಟಿ. ಯು.ವಿನ ಬೆಳವಣಿಗೆಯನ್ನು ಕಾಂ. ಪಂಧೆ ವರದಿ ಎತ್ತಿತೋರಿಸಿತು. ಸಿ. ಐ. ಟಿ. ಯು. ಸಂಘಗಳ ವಿರುದ್ಧ ಅನುಸರಿಸುತ್ತಿರುವ ತಾರತಮ್ಯ, ಸಿ.ಐ.ಟಿ.ಯು. ಸಂಘಗಳ ಮೇಲೆ ನಡೆಯುತ್ತಿರುವ ದಬ್ಬಾಳಿಕೆಯ ಪೂರ್ಣ ಚಿತ್ರಣ ವರದಿಯಲ್ಲಿತ್ತು. ರಶಿಯಾ, ಚೈನಾ ಮತ್ತಿನ್ನಿತರ ದೇಶಗಳ ಕಾರ್ಮಿಕಸಂಘಟನೆಗಳೊಂದಿಗೆ ವೃದ್ಧಿಸಿದ ಸ್ನೇಹ ಸಂಬಂಧಗಳ ಕುರಿತೂ ಕಾಂ. ಪಂಧೆ ವಿವರಿಸಿದರು,

ನಂತರ ಇ.ಎಸ್.ಐ. (ESI) ಯೋಜನೆಯ ಕುರಿತು ಚರ್ಚೆಯನ್ನು ಕಾಂ. ಪಂದೆ ಪ್ರಾರಂಭಿಸಿದರು. 14 ಜನ ಸಂಗಾತಿಗಳು ಈ ಚರ್ಚೆಯಲ್ಲಿ ಪಾಲ್ಗೊಂಡಿದ್ದರು.

ಕೇಂದ್ರ ಕಾರ್ಮಿಕ ಶಿಕ್ಷಣಮಂಡಳಿಗೆ ಸಿಐ.ಟಿ.ಯು. ವಿನಿಂದಪ್ರತಿನಿಧಿಯನ್ನು ಕಳಿಸಕೂಡದೆಂಬ ಸಿ.ಐ.ಟಿ.ಯು. ಸೆಕ್ರೆಟಾರಿಯೇಟ್ ತೀರ್ಮಾನವನ್ನು ಜನರಲ್ ಕೌನ್ಸಿಲ್ ಸರ್ವಾನುಮತದಿಂದ ಅನುಮೋದಿಸಿತು.

ಎ. ಸಿ. ಎಫ್. ಟಿ. ಯು. (All ChinaFederation ofTrade unions) ಆಹ್ವಾನದ ಮೇಲೆ ಚೈನಾಕ್ಕೆ ತೆರಳಿದ್ದ ಕಾಂ.ಸಿ. ಕಣ್ಣನ್ ಮತ್ತು ಕಾಂ. ಲಕ್ಷ್ಮೀಸೇನ್ ಇವರು ವರದಿ ಒಪ್ಪಿಸಿದರು.

ರಶಿಯಾದ ಎ.ಯು.ಸಿ.ಸಿ.ಟಿ.ಯು. (All-union central council of Trade unions) ಆಹ್ವಾನದ ಮೇಲೆ ರಶಿಯಕ್ಕೆ ತೆರಳಿದ್ದ ಕಾಂ. ಕೆ. ರಮಣಿ ವರದಿ ಒಪ್ಪಿಸಿದರು. ಝೆಕೊಸ್ಲೋವಾಕಿಯಕ್ಕೆ ತೆರಳಿದ್ದ ಕಾ. ಬಿರೇನ್‌ರಾಯ್, ಸೋಫಿಯಕ್ಕೆತೆರಳಿದ್ದ ಸಿ.ಐ.ಟಿ.ಯು. ಕರ್ನಾಟಕ ರಾಜ್ಯಸಮಿತಿಯ ಅಧ್ಯಕ್ಷ ಕಾಂ. ಸೂರ್ಯನಾರಾಯಣರಾವ್ ಇವರುಗಳು ವರದಿ ಒಪ್ಪಿಸಿದರು.

ಕರ್ನಾಟಕ ರಾಜ್ಯ ಸಮಿತಿಯ ಪ್ರಧಾನಕಾರ್ಯದರ್ಶಿ ಕಾಂ. ಸಿ. ನಂಜುಂಡಪ್ಪ ಮತ್ತು ಇತರ 30 ಸಂಗಾತಿಗಳು ಕಾಂ. ಪಿ.ಆರ್. ವರದಿಯ ಮೇಲೆ ನಡೆದ ಚರ್ಚೆಯಲ್ಲಿ ಭಾಗವಹಿಸಿದ್ದರು.

ಚರ್ಚೆಯಲ್ಲಿ ಎತ್ತಿದ ಕೆಲವು ಅಂಶಗಳಿಗೆ ಕಾಂ. ಪಿ. ಆರ್. ಉತ್ತರಿಸಿದರು. ಸಿ.ಐ.ಟಿ.ಯು. ಕೇಂದ್ರ ಕೆಲಸ ನಿರ್ವಹಣೆಯ ಕುರಿತು ಇನ್ನೂ ಗಮನವೀಯಬೇಕಾಗಿದೆಯೆಂದೂ ಕಾಂ. ಪಿ. ಆರ್. ತಿಳಿಸಿದರು. ಪ್ರಧಾನ ಕಾರ್ಯದರ್ಶಿಯ ವರದಿ ಮತ್ತು ಕೆಲಸದ ವರದಿಯನ್ನು ಜನರಲ್ ಕೌನ್ಸಿಲ್ ಅನುಮೋದಿಸಿತು.

ಕಾಂ. ನೃಸಿಂಗ್ ಚಕ್ರವರ್ತಿಯವರು ರೆಸಲ್ಯೂಶನ್ ಸಬ್ ಕಮಿಟಿಯ ವರದಿ ಸಲ್ಲಿಸಿದರು. 33 ಗೊತ್ತುವಳಿಗಳನ್ನು ಪರೀಕ್ಷಿಸಿದ ಸಮಿತಿಯು ಕೆಲವು ತಿದ್ದುಪಡಿಗಳನ್ನೂ ಒಳಗೊಂಡ ಗೊತ್ತುವಳಿಗಳ ಪ್ರತಿಗಳನ್ನು ಎಲ್ಲ ಸಂಗಾತಿಗಳಿಗೆ ವಿತರಣೆ ಮಾಡಿತು.

ಸ್ಥಳ ಕಾಯ್ದಿರಿಸುವಿಕೆ (Reservation) ನಿರ್ಣಯದ ಕುರಿತು ಕರ್ನಾಟಕ ರಾಜ್ಯ ಸಿ.ಐ.ಟಿ.ಯು. ಕಾರ್ಯದರ್ಶಿ ಕಾಂ. ವಿ.ಜೆ.ಕೆ.ನಾಯರ್ ಮಾತನಾಡಿದರು.

ಕೊನೆಯಲ್ಲಿ ಕಾಂ. ಬಿ.ಟಿ.ಆರ್. ರು ತಮ್ಮ ಮುಕ್ತಾಯದ ಭಾಷಣದಲ್ಲಿ ಜಂಟೀಕಾರ್ಯಾಚರಣೆಗಳ ಕುರಿತು ವಿವರಿಸಿದರು.

ಆಗಸ್ಟ್ 25 ರಂದು ಬೃಹತ್ ರ್‍ಯಾಲಿಯನ್ನು ಸಂಘಟಿಸಲಾಗಿತ್ತು. ಕಾಂ. ಬಿ.ಟಿ.ಆರ್., ಜ್ಯೋತಿಬಸು ಮತ್ತು ಕಾಂ. ಮನೋರಂಜನ್‌ರಾಯ್ ಇವರುಗಳು ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದರು. ●

ಪ. ಬಂಗಾಲ ಬಂದ್ ಸಂಪೂರ್ಣ ಯಶಸ್ವಿ

ಅಗತ್ಯಸೇವಾ ಸುಗ್ರೀವಾಜ್ಞೆಯ ವಿರುದ್ಧ ಪ್ರತಿಭಟಿಸಲು ಪ. ಬಂಗಾಳದ ಪಾಮರಂಗ 11-9-81 ರಂದು ರಾಜ್ಯ ವ್ಯಾಪೀ ಬಂದ್‌ಗೆ ಕರೆ ನೀಡಿತ್ತು.

ನಮಗೆ ಬಂದಿರುವ ವರದಿಗಳ ಪ್ರಕಾರ ರಾಜ್ಯದಾದ್ಯಂತ ಬಂದ್ ಸಂಪೂರ್ಣ ಯಶಸ್ವಿಯಾಗಿದೆಯೆಂದು ತಿಳಿದು ಬಂದಿದೆ. ಅಧಿಕಾರರೂಢ ಪಾಮರಂಗವನ್ನು ಬೆಂಬಲಿಸುತ್ತ ಬಂದಿರುವ ಪ. ಬಂಗಾಳದ ಜನತೆ ಸೆಪ್ಟೆಂಬರ್ 11 ರಂದು ನಡೆದ ಬಂದ್‌ಗೆ ಸಹಕರಿಸಿ ಮತ್ತೊಮ್ಮೆ ಪಾಮರಂಗ ಸರಕಾರಕ್ಕೆ ತಮ್ಮ ಪ್ರಚಂಡ ಬೆಂಬಲ ವ್ಯಕ್ತಪಡಿಸಿದ್ದಾರೆ.

ಪ. ಬಂಗಾಲ ಜನತೆಗೆ ನಮ್ಮ ಅಭಿನಂದನೆಗಳು.

○

ನವೆಂಬರ್ 3ರಂದು ಸಾರ್ವತ್ರಿಕ ಮುಷ್ಕರ

ಅಗತ್ಯಸೇವಾ ಮಸೂದೆಯನ್ನು ವಿರೋಧಿಸಿ ನವೆಂಬರ್ 3ರಂದು ರಾಜ್ಯದಾದ್ಯಂತ ಸಾರ್ವತ್ರಿಕ ಮುಷ್ಕರವನ್ನು ನಡೆಸಲು ಸೆಪ್ಟೆಂಬರ್ 6ರಂದು ಬೆಂಗಳೂರಿನಲ್ಲಿ ನಡೆದ ಕಾರ್ಮಿಕಸಂಘಟನೆಗಳ ರಾಜ್ಯಮಟ್ಟದ ಸಮಾವೇಶವು ಕರೆಕೊಟ್ಟಿದೆ.

ಸುಮಾರು 1200ರಷ್ಟು ಪ್ರತಿನಿಧಿಗಳು ಭಾಗವಹಿಸಿರುವ ಸಮಾವೇಶದ ವಿವರವನ್ನು ಮುಂದಿನವಾರ ಕೊಡಲಾಗುವುದು.

ಐಕ್ಯರಂಗ ಏಜೆನ್ಸಿ ಮತ್ತು ಓದುಗರ ಅವಗಾಹನೆಗೆ

ಐಕ್ಯರಂಗದ ಹಲವಾರು ಏಜೆನ್ಸಿಗಳು ಸರಿಯಾಗಿ ತಿಂಗಳು ತಿಂಗಳು ಹಣ ಕಳುಹಿಸಿಕೊಡುತ್ತಿಲ್ಲ. ಬಹಳಷ್ಟು ಹಣ ಬಾಕಿ ಇರುವುದರಿಂದ ಈಗಾಗಲೇ ಹಲವು ಏಜೆನ್ಸಿಗಳನ್ನು ರದ್ದುಮಾಡಲಾಗಿದೆ. ಈ ವಾರದಿಂದ ಇನ್ನೂ ಕೆಲವು ಏಜೆನ್ಸಿಗಳಿಗೆ ಪತ್ರಿಕೆ ಕಳುಹಿಸುವುದನ್ನು ನಿಲ್ಲಿಸಲಾಗುವುದು. ಸೆಪ್ಟೆಂಬರ್ ಕೊನೆಯೊಳಗೆ ಈ ತನಕದ ಎಲ್ಲಾ ಬಾಕಿಯನ್ನು ಸಂಪೂರ್ಣವಾಗಿ ಸಂದಾಯ ಮಾಡದಿದ್ದಲ್ಲಿ, ಅಂತಹ ಎಲ್ಲಾ ಏಜೆನ್ಸಿಗಳಿಗೆ ಪತ್ರಿಕೆ ಕಳುಹಿಸುವುದನ್ನು ನಿಲ್ಲಿಸಲಾಗುವುದು. ಕೆಲವು ಕಡೆ ಪತ್ರಿಕೆಯನ್ನು ತೆಗೆದುಕೊಳ್ಳುವವರೂ ಸರಿಯಾಗಿ ಹಣ ಕೊಡುತ್ತಿಲ್ಲ ಎಂಬ ದೂರು ಇದೆ. ಅಂತೂ, ಪತ್ರಿಕೆಯನ್ನು ನಡೆಸುವುದೇ ಕಷ್ಟಸಾಧ್ಯ ಎಂಬ ಪರಿಸ್ಥಿತಿ ಉಂಟಾಗುತ್ತಿದೆ.

ಏಜೆನ್ಸಿಗಳ ಹಣ ಬಾಕಿಯಿಂದಲಾಗಿ ಪತ್ರಿಕೆಯನ್ನು ನಿಲ್ಲಿಸುವುದರಿಂದ ಅನೇಕ ಓದುಗರಿಗೆ ತೊಂದರೆಯಾಗುವುದು ಸಹಜ. ಈ ಬಗ್ಗೆ ನಾವೂ ಬೇಸರಿಸುತ್ತೇವಾದರೂ ಈ ಕ್ರಮ ಅನಿವಾರ್ಯವಾಗಿದೆ.

ಸಂಪಾದಕ ಮಂಡಳಿ

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street Sultanpet, Bangalore-560 053. Editorial and managerial office : L-56, K. V. Temple Street, Sultanpet Bangalore-560 053. Phone-24154
EDITOR : M. K. BHAT